ಸಂಪಾದಕರು: ರವಿಕುಮಾರ್ ಸಿ.ಹೆಚ್.
RNI: KARKAN/2021/80805
ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

ಸೂರ್ಯ ಪ್ರಗತಿ

SURYA PRAGATHI Kannada daily
SP NEWS ಡಿಜಿಟಲ್ ನ್ಯೂಸ್ ಚಾನಲ್
ಪ್ರತಿ ಸುದ್ದಿಯ ಧ್ವನಿ
suryapragathidailynews@gmail.com 9901010109
L2/RNP-1285/TMR/2025-27

Volume: 05 ಸಂಪುಟ: 05 | Issue:169 ಸಂಚಿಕೆ: 169 | Date:26-07-2026 Sunday | RNI NO : KARKAN/2021/80805 | L2/RNP-1285/TMR/2025-27 | Page :4 ಪುಟ : 4 | Price: 1.00 ಬೆಲೆ: 1.00 ರೂ

ಬರದ ಬಿಸಿ ಜನರನ್ನು ತಟ್ಟಲು ಬಿಡೆವು : ಡಿಸಿಎಂ ಡಾ.ಜಿ.ಪರಮೇಶ್ವರ

ಸೂರ್ಯಪ್ರಗತಿನ್ಯೂಸ್.ಕಾಂ

ಚಿತ್ರದುರ್ಗ:– ರಾಜ್ಯದಲ್ಲಿ ಬಹುತೇಕ ಜಲಾಶಯಗಳು ತಳಮಟ್ಟಕ್ಕೆ ಬಂದಿದ್ದು, ಶೇ. 80ರಷ್ಟು ಕೆರೆಗಳು ಬತ್ತಿ ಹೋಗಿವೆ ಎಂದು ಉಪಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರಾದ ಡಾ. ಜಿ.ಪರಮೇಶ್ವರ ಅವರು ಹೇಳಿದರು.

ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ಅವರೊಂದಿಗೆ ಚಿತ್ರದುರ್ಗ ಪ್ರವಾಸ ಕೈಗೊಂಡು, ಹಿರಿಯೂರು ತಾಲೂಕಿನಲ್ಲಿ ಬರ ಪೀಡಿತ ಪ್ರದೇಶಗಳಿಗೆ ಖುದ್ದು ಭೇಟಿ ನೀಡಿ, ಬರ ಪರಿಸ್ಥಿತಿಯನ್ನು ಅವಲೋಕನ ನಡೆಸಿದರು. ಬಳಿಕ ಚಿತ್ರದುರ್ಗದ ಮುರುಘರಾಜೇಂದ್ರ ಬೃಹನ್ಮಠದ ಅನುಭವ ಮಂಟಪ ಸಭಾಂಗಣದಲ್ಲಿ ನಡೆದ ಬೆಂಗಳೂರು ಪ್ರಾದೇಶಿಕ ವಿಭಾಗ ಮಟ್ಟದ ಪ್ರಗತಿ ಪರಿಶೀಲನಾ ಸಭೆಯನ್ನು ಉದ್ದೇಶಿಸಿ ಡಿಸಿಎಂ ಜಿ.ಪರಮೇಶ್ವರ ಅವರು ಮಾತನಾಡಿದರು.





ರಾಜ್ಯದಲ್ಲಿ ಬರದ ಗಂಭೀರತೆಯನ್ನು ನೋಡಿದರೆ ಮೊದಲನೆಯ ಕಷ್ಟ ಕುಡಿಯುವ ನೀರಿಗೆ ತೊಂದರೆ ಆಗಬಹುದು. ಜಲಾಶಯಗಳಲ್ಲಿ ಲಭ್ಯತೆ ಇರುವ ನೀರನ್ನು ಕೃಷಿ ಚಟುವಟಿಕೆಗಳಿಗೆ ಬಳಸುವಂತಿಲ್ಲ. ಕುಡಿಯುವ ನೀರಿಗೆ ಮಾತ್ರ ಬಳಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಜನರಿಗೆ ಬರದ ಸಮಸ್ಯೆಯಾಗದಂತೆ ಕ್ರಮ ವಹಿಸಬೇಕು ಎಂದು ಹೇ.ರಾಜ್ಯದಲ್ಲಿ ಬರಗಾಲದ ಪರಿಸ್ಥಿತಿ ಎಷ್ಟು ಗಂಭೀರವಾಗಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆ. ಇದನ್ನು ಅರ್ಥ ಮಾಡಿಕೊಂಡು ಮಾನ್ಯ ಮುಖ್ಯಮಂತ್ರಿಯವರು ಬೆಳಗಾವಿ ಮತ್ತು ಕಲಬುರ್ಗಿ ವಿಭಾಗದ ಪರಿಶೀಲನೆ ನಡೆಸಿ, ಪರಿಸ್ಥಿತಿಯನ್ನು ಅವಲೋಕನ ನಡೆಸಿದ್ದಾರೆ.

ನಾನು ಕಂದಾಯ ಸಚಿವನಾಗಿ ಅನೇಕ ಜಿಲ್ಲೆಗಳಿಗೆ ಭೇಟಿ ಕೊಟ್ಟಿದ್ದೇನೆ. ಚಿಕ್ಕಬಳ್ಳಾಪುರ, ಕೋಲಾರ, ತುಮಕೂರು, ಚಿತ್ರದುರ್ಗ ಮುಂತಾದ ಜಿಲ್ಲೆಗಳಿಗೆ ಖುದ್ದು ಭೇಟಿ ನೀಡಿದ್ದೇನೆ. ಬೇರೆ ಜಿಲ್ಲೆಗಳಿಗೂ ಭೇಟಿ ನೀಡಿ ಅವಲೋಕನ ನಡೆಸುತ್ತೇನೆ ಎಂದು ಹೇಳಿದರು.

ನಮಗೆ ಕಾಣುತ್ತಿರುವ ಬರದ ಚಿತ್ರಣ ಬಹಳ ಗಂಭೀರವಾಗಿದೆ. ಜೂನ್‌ನಲ್ಲಿ ಸ್ವಲ್ಪ ಮಟ್ಟಿಗೆ ಮಳೆಯಾದರೂ ಎಲ್ಲ ಭಾಗದಲ್ಲಿ ಮಳೆಯಾಗಿಲ್ಲ. ರೈತರು ಬಿತ್ತನೆ ಮಾಡಿದ್ದಾರೆ. ಈವರೆಗೆ ಶೇ.42ಕ್ಕೂ ಹೆಚ್ಚು ಮಳೆ ಕೊರತೆಯಾಗಿದೆ. ಮಳೆ ಕೊರತೆ ಪ್ರಮಾಣ ಅಂಕಿ–ಅಂಶ ಜಿಲ್ಲೆಯಿಂದ ಜಿಲ್ಲೆಗೆ ಬೇರೆಬೇರೆ ಇದೆ. ಇದರಿಂದ ಕೃಷಿ ಚಟುವಟಿಕೆಗಳು ಎಲ್ಲ ಕಡೆ ನಿಂತು ಹೋಗಿವೆ. ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬಿತ್ತನೆ ಶೇ. 2ರಷ್ಟು ಆಗಿದೆ. ಕೋಲಾರದಲ್ಲಿ ಶೇ. 1.5 ರಿಂದ 2ರಷ್ಟಾಗಿದೆ. ಚಿತ್ರದುರ್ಗ ಜಿಲ್ಲೆಯಲ್ಲಿ ಶೇ. 3 ಮತ್ತು 4ರಷ್ಟಾಗಿದ್ದು, ಕೆಲವು ಕಡೆ ಶೇ.10ರಷ್ಟು ಬಿತ್ತನೆಯಾಗಿದೆ. ಇಡೀ ರಾಜ್ಯದಲ್ಲಿ ಒಟ್ಟಾರೆ ಶೇ.15ರಷ್ಟು ಬೀಜ ಬಿತ್ತನೆಯಾಗಿದೆ ಎಂದು ವಿವರಿಸಿದರು.

ಫೆಸಿಫಿಕ್ ಸಾಗರದ ಮೇಲ್ಮೈ ಭಾಗದ ಉಷ್ಣಾಂಶ ಶೇ. 2ರಷ್ಟು ಹೆಚ್ಚಾಗುತ್ತದೆ. ಉಷ್ಣಾಂಶ ಹೆಚ್ಚಾಗುವುದರಿಂದ ಮಳೆ ಮೋಡಗಳು ಸೃಷ್ಟಿಯಾಗುವುದಿಲ್ಲ. ಕಳೆದ 75 ವರ್ಷಗಳ ಅಂಕಿ ಅಂಶಗಳನ್ನು ಗಮನಿಸಿದಾಗ 25 ಸಲ ಎಲ್ ನೀನೋ ಉಂಟಾಗಿದೆ. ಸಾಮಾನ್ಯವಾಗಿ ಸಮುದ್ರ ಮೇಲ್ಮೈ ಉಷ್ಣಾಂಶ 1 ಡಿಗ್ರಿಯಿಂದ 2 ಡಿಗ್ರಿವರೆಗೆ ಹೆಚ್ಚಾಗುತ್ತಿತ್ತು. ಈ ಬಾರಿ 2 ಡಿಗ್ರಿಯಿಂದ 3 ಡಿಗ್ರಿವರೆಗೆ ಹೆಚ್ಚಾಗಿದೆ. ಸೂಪರ್ ಎಲ್ ನೀನೋ ಉಂಟಾಗಿರುವ ಕಾರಣದಿಂದ ಪ್ರಪಂಚದ ಶೇ. 50ರಷ್ಟು ಭಾಗ ಬರದ ವಾತಾವರಣವನ್ನು ನೋಡುತ್ತಿದ್ದೇವೆ. ಕರ್ನಾಟಕವಷ್ಟೇ ಅಲ್ಲದೇ, ದೇಶದ ಎಲ್ಲ ರಾಜ್ಯಗಳಲ್ಲಿ ಬರ ಎದುರಾಗಿದೆ ಎಂದು ಮಾಹಿತಿ ನೀಡಿದರು.

ಯೂರೋಪ್ ರಾಷ್ಟ್ರಗಳಲ್ಲಿ 35 ರಿಂದ 40 ಡಿಗ್ರಿ ಉಷ್ಣಾಂಶ ಹೆಚ್ಚಾಗಿದೆ. ಇದರಿಂದ ಯುರೋಪ್ ದೇಶಗಳಲ್ಲಿ 5,000 ಜನ ಸಾವಿಗೀಡಾಗಿದ್ದಾರೆ. ಪ್ರಪಂಚದ ಅರ್ಧ ಭಾಗದಲ್ಲಿ 20 ಸಾವಿರ ಜನ ಮೃತಪಟ್ಟಿದ್ದಾರೆ. ಸೂಪರ್ ಎಲ್ ನೀನೋ ಗಂಭೀರತೆ ಎಷ್ಟಿದೆ ಎಂಬುದು ಇದರಿಂದಲೇ ಗೊತ್ತಾಗುತ್ತದೆ. ಅನೇಕ ರಾಜ್ಯಗಳು ಒಣ ಹವೆ ಎದುರಿಸುತ್ತಿದ್ದಾರೆ. ರಾಜ್ಯದ ಮಲೆನಾಡು, ಕರಾವಳಿ ಪ್ರದೇಶಗಳಲ್ಲಿ ಸ್ವಲ್ಪ ಮಳೆಬಿದ್ದಿದೆ. ಮಹಾರಾಷ್ಟ್ರದಲ್ಲಿ ಮಳೆ ಆಗಿರುವುದರಿಂದ ಆಲಮಟ್ಟಿ ಜಲಾಶಯಕ್ಕೆ ನೀರು ಬರುತ್ತಿದೆ ಎಂದರು.



ಚಿತ್ರದುರ್ಗ ಜಿಲ್ಲೆಯ ಹಿ ರಿ ೦ು ೨ೂ ರ್ು ತಾಲ್ಲೂಕಿನ ಯರಬಳ್ಳಿ ಗ್ರಾಮದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ಅವರು ಹಾಗೂ ಮಾನ್ಯ ಉಪ ಮುಖ್ಯಮಂತ್ರಿಗಳಾದ ಡಾ. ಜಿ.ಪರಮೇಶ್ವರ ಅವರು ಜಮೀನುಗಳಿಗೆ ಭೇಟಿ ನೀಡಿ ಬರ ಪರಿಸ್ಥಿತಿಯನ್ನು ಖುದ್ದು ಪರಿಶೀಲನೆ ನಡೆಸಿದರು. ಈವರೆಗಿನ ಕೃಷಿ ಚಟುವಟಿಕೆ ಹಾಗೂ ರೈತರ ಸಮಸ್ಯೆಯನ್ನು ಆಲಿಸಿದರು.



ಉಪಮುಖ್ಯಮಂತ್ರಿಗಳಾದ ಡಾ. ಜಿ.ಪರಮೇಶ್ವರ ಅವರು ಇಂದು ಕೊರಟಗೆರೆ ತಾಲ್ಲೂಕಿನ ಬುಕ್ಕಪಟ್ಟಣದಲ್ಲಿ ತಳ ಸಮುದಾಯದ ಹಿರಿಯ ನಾಯಕರು ಹಾಗೂ ಮಾಜಿ ಸಚಿವರಾದ ಸಿ.ವೀರಣ್ಣ ಅವರ ಪಾರ್ಥೀವ ಶರೀರದ ದರ್ಶನ ಪಡೆದು, ಅಂತಿಮ ನಮನ ಸಲ್ಲಿಸಿದರು. ಮೃತರ ಆತ್ಮಕ್ಕೆ ಸದ್ಗತಿ ಕೋರಿ, ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು.

ನೀಟ್ ವಿವಾದದ ನಡುವೆಯೇ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ

ಕೇಂದ್ರದ ಸಂಧಾನ; ಜಿರಳೆ ಪಾರ್ಟಿ ಹೋರಾಟ ವಾಪಸ್!


ನವದೆಹಲಿ: ನೀಟ್ ವಿವಾದದ ನಡುವೆಯೇ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ಸಲ್ಲಿಸಿದ್ದು, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸ್ಪಷ್ಟನೆ ನೀಡಿದ್ದಾರೆ.

ಹೌದು... ನೀಟ್–ಯುಜಿ 2026 ಪರೀಕ್ಷೆ ವಿವಾದದ ನಡುವೆಯೇ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ತಮ್ಮ ರಾಜೀನಾಮೆ ಸಲ್ಲಿಸಿರುವುದಾಗಿ ಘೋಷಿಸಿದ್ದಾರೆ. ದೇಶದ ಯುವಜನತೆ ಹಾಗೂ ವಿದ್ಯಾರ್ಥಿಗಳ ಭವಿಷ್ಯದ ಹಿತದೃಷ್ಟಿಯಿಂದ ಈ ನಿರ್ಧಾರ ಕೈಗೊಂಡಿರುವುದಾಗಿ ಅವರು ತಿಳಿಸಿದ್ದಾರೆ.

ಸಾಮಾಜಿಕ ಜಾಲತಾಣ ಎಕ್ಸ್ (X) ನಲ್ಲಿ ಪ್ರಕಟಿಸಿರುವ ಎರಡು ಪುಟಗಳ ಪತ್ರದಲ್ಲಿ ದೇಶದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿರುವ ಧರ್ಮೇಂದ್ರ ಪ್ರಧಾನ್, 'ನೀಟ್–ಯುಜಿ 2026 ಪರೀಕ್ಷೆಗೆ ಸಂಬಂಧಿಸಿದ ಬೆಳವಣಿಗೆಗಳ ನೈತಿಕ ಹೊಣೆಯನ್ನು ಮೊದಲ ದಿನದಿಂದಲೇ ತಾವು ಹೊತ್ತಿದ್ದು, ಪರಿಸ್ಥಿತಿಯಿಂದ ಎಂದಿಗೂ ಹಿಂದೆ ಸರಿಯಲಿಲ್ಲ' ಎಂದು ಹೇಳಿದ್ದಾರೆ.

ಮೇ 3, 2026ರಂದು ನಡೆದ ನೀಟ್–ಯುಜಿ ಪರೀಕ್ಷೆಯಲ್ಲಿ ಅಕ್ರಮಗಳು ಬೆಳಕಿಗೆ ಬಂದ ತಕ್ಷಣವೇ ಕೇಂದ್ರ ಸರ್ಕಾರ ತನಿಖೆಯನ್ನು ಸಿಬಿಐಗೆ ವಹಿಸಿತ್ತು. ಪರೀಕ್ಷೆಯನ್ನು ರದ್ದುಪಡಿಸಿ ಮರುಪರೀಕ್ಷೆ ನಡೆಸುವ ನಿರ್ಧಾರ ಕೈಗೊಂಡಿತ್ತು. ಜೊತೆಗೆ ಮುಂದಿನ ವರ್ಷದಿಂದ ನೀಟ್ ಪರೀಕ್ಷೆಯನ್ನು ಕಂಪ್ಯೂಟರ್ ಆಧಾರಿತ ಪರೀಕ್ಷೆ (CBT) ಮಾದರಿಯಲ್ಲಿ ನಡೆಸಲು ತೀರ್ಮಾನಿಸಲಾಗಿದೆ ಎಂದು ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

20 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಯಾವುದೇ



ಅಡಚಣೆಯಿಲ್ಲದೆ ಪರೀಕ್ಷೆ ಬರೆಯುವಂತೆ ಮಾಡುವುದೇ ಸರ್ಕಾರದ ಪ್ರಮುಖ ಆದ್ಯತೆಯಾಗಿತ್ತು. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು, ಜಿಲ್ಲಾ ಆಡಳಿತ, ವಿದ್ಯಾರ್ಥಿಗಳು ಹಾಗೂ ಪೋಷಕರ ಸಹಕಾರದಿಂದ ಜೂನ್ 21ರಂದು ಮರುಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಲಾಯಿತು ಎಂದು ಪ್ರಧಾನ್ ತಿಳಿಸಿದ್ದಾರೆ.

ಜುಲೈ 16ರಂದು ಪ್ರಕಟವಾದ ಫಲಿತಾಂಶದಲ್ಲಿ ಬಡ ಹಿನ್ನೆಲೆಯ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳಿಗೂ ಯಶಸ್ಸು ದೊರೆತಿದೆ. ಆದರೆ ಈ ಅವಧಿಯಲ್ಲಿ ಜವಾಬ್ದಾರಿಯುತ ಹುದ್ದೆಗಳಲ್ಲಿ ಕುಳಿತಿದ್ದ ಕೆಲವರು ವಿದ್ಯಾರ್ಥಿಗಳನ್ನು ದಾರಿ ತಪ್ಪಿಸಲು ಪ್ರಯತ್ನಿಸಿದ್ದು, ಅದು ತಮ್ಮ ಮನಸ್ಸಿಗೆ ತೀವ್ರ ನೋವುಂಟು ಮಾಡಿದೆ ಎಂದು ಅವರು ಹೇಳಿದ್ದಾರೆ.

ಕಳೆದ 10 ದಿನಗಳ ಬೆಳವಣಿಗೆಗಳು ತಮ್ಮನ್ನು ಅತ್ಯಂತ ದುಃಖಿತಗೊಳಿಸಿವೆ. ಇದು ತಮ್ಮ ವೈಯಕ್ತಿಕ ಪ್ರತಿಷ್ಠೆಯ ಪ್ರಶ್ನೆಯಲ್ಲ, ಭಾರತದ ಯುವಶಕ್ತಿಯ ಭವಿಷ್ಯದ ಪ್ರಶ್ನೆಯಾಗಿದೆ ಎಂದು ಪ್ರಧಾನ್ ತಿಳಿಸಿದ್ದಾರೆ.

ಯುವಜನತೆ ಶಿಕ್ಷಣ ಮತ್ತು ವೃತ್ತಿಜೀವನದತ್ತ ಗಮನಹರಿಸಬೇಕು

ದೆಹಲಿ ಜಂತರ್ ಮಂತರ್ ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ಪ್ರತಿಭಟನೆಗಳನ್ನು ಉಲ್ಲೇಖಿಸಿರುವ ಅವರು, ಭಾರತದ ಯುವಜನತೆ ಶಿಕ್ಷಣ ಮತ್ತು ವೃತ್ತಿಜೀವನದತ್ತ ಗಮನಹರಿಸಬೇಕು. ದೇಶವಿರೋಧಿ ಶಕ್ತಿಗಳು ಈ ಪರಿಸ್ಥಿತಿಯನ್ನು ದುರುಪಯೋಗಪಡಿಸಿಕೊಳ್ಳಬಾರದು.

ದೇಶದ ಏಕತೆ ಕಾಪಾಡಲ್ಪಡಬೇಕು ಹಾಗೂ ಒಬ್ಬ ವಿದ್ಯಾರ್ಥಿಯ ಭವಿಷ್ಯವೂ ಕಾನೂನು ಹೋರಾಟಗಳಲ್ಲಿ ಸಿಲುಕಬಾರದು ಎಂಬ ಉದ್ದೇಶದಿಂದ ತಮ್ಮ ರಾಜೀನಾಮೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕಳುಹಿಸಿದ್ದೇನೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್





ರಾಜೀನಾಮೆ: ಪ್ರಜಾಪ್ರಭುತ್ವದ ಗೆಲುವು– ಸೋನಮ್ ವಾಂಗ್‌ಚುಕ್

NEET ಪ್ರಶ್ನೆ ಪತ್ರಿಕೆ ಸೋರಿಕೆ ವಿರೋಧಿಸಿ ದೇಶಾದ್ಯಂತ ನಡೆದ ನಿರಂತರ ಪ್ರತಿಭಟನೆ ಮತ್ತು ಸಾಮಾಜಿಕ ಕಾರ್ಯಕರ್ತ ಸೋನಮ್ ವಾಂಗ್ ಚುಕ್ ಜಂತರ್ ಮಂತರ್‌ನಲ್ಲಿ ನಡೆಸಿದ 26 ದಿನಗಳ ಕಾಲ ಕಠಿಣ ಉಪವಾಸ ಸತ್ಯಾಗ್ರಹ ನಡೆಸಿದ ನಂತರ, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರಪ್ರಧಾನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ತಮ್ಮ ರಾಜೀನಾಮೆಯನ್ನು ಸಲ್ಲಿಸಿದ್ದಾರೆ.

ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಅವರು ಪ್ರತಿಕ್ರಿಯಿಸಿದ್ದು, ಈ ಬೆಳವಣಿಗೆಯನ್ನು ಭಾರತದಲ್ಲಿ ನೇರ ನಾಗರಿಕ ಕ್ರಿಯೆಯ (ಜುಡಿಜಚಿಣ ಛಿತುಟಿ ಚಿಟಿಣುಶಿಟಿ) ನಿಟ್ಟಿನಲ್ಲಿ ಒಂದು ಪ್ರಮುಖ ಮೈಲಿಗಲ್ಲು ಎಂದು ಬಣ್ಣಿಸಿದ್ದಾರೆ., ದೇಶದ ಯುವಜನತೆ ಮತ್ತು ನಾಗರಿಕರ ದೃಢತೆಯನ್ನು ಶ್ಲಾಘಿಸಿದ್ದಾರೆ.

"ಇದು ಪ್ರಜಾಪ್ರಭುತ್ವದ ಗೆಲುವು. ನೇರ ಪ್ರಜಾಪ್ರಭುತ್ವ ನೇರವಾಗಿ ಬೀದಿಗಳಿಂದಲೇ ಮೂಡಿಬಂದದ್ದು. ಇದು ಶಾಂತಿ, ತಾಳ್ಮೆ ಮತ್ತು ಪರಿಶ್ರಮದ ಗೆಲುವು. ಅವಕಿ ಮತ್ತು ದೇಶದ 'ಜೆನ್–ಝಡ್' (ಉಜಟಿ ಚ) ಯುವಜನತೆಗೆ ಅಭಿನಂದನೆಗಳು. ಹಾಗೆಯೇ, ಭಯ ಮತ್ತು ಭಯದ ಕುರಿತಾದ ಆತಂಕವನ್ನೂ ತೊರೆದು ದೇಶದ ಮೂಲೆಮೂಲೆಗಳಿಂದ ಎದ್ದುನಿಂತ ಎಲ್ಲಾ ನಾಗರಿಕರಿಗೂ ಧನ್ಯವಾದಗಳು. ಹೊಣೆಗಾರಿಕೆಯಿಂದ ಈಗ ಸುಧಾರಣೆಗಳತ್ತ ಎಂದು ವಾಂಗ್‌ಚುಕ್ ಪೋಸ್ಟ್ ಮಾಡಿದ್ದಾರೆ

ಸಮ್ಮೇಳನದ ಲೆಕ್ಕವನ್ನು ಹಣ ನೀಡಿದವರು ಮಾತ್ರ ಕೇಳಬೇಕು

ಸಿದ್ದಲಿಂಗಪ್ಪನವರ ಮಾತು ಪಾಳೆಗಾರಿಕೆ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ

ಮಧುಗಿರಿ..... ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷರಾದ ಸಿದ್ದಲಿಂಗಪ್ಪ ರವರ ಹೇಳಿಕೆಯನ್ನು ಖಂಡಿಸುವುದಾಗಿ ಉಪನ್ಯಾಸಕ ಬಂದ್ರೆಹಳ್ಳಿ ಕುಮಾರ್ ತಿಳಿಸಿದ್ದಾರೆ ಇತ್ತೀಚೆಗೆ ಕನ್ನಡ ಭವನದಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಕ ಸಾ ಪ ಜಿಲ್ಲಾಧ್ಯಕ್ಷರಾದ ಸಿದ್ದಲಿಂಗಪ್ಪನವರ ಸಾಹಿತ್ಯ ಸಮ್ಮೇಳನದ ಲೆಕ್ಕವನ್ನು ಸಮ್ಮೇಳನಕ್ಕೆ ಹಣ ನೀಡಿದವರು ಮಾತ್ರ ಕೇಳಬೇಕು ಎಂಬ ಅವರ ಮಾತುಗಳು ಪಾಳೆಗಾರಿಕೆ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ ಕಸಾಪ ಯಾವೊಬ್ಬ ವ್ಯಕ್ತಿಯ ಕಂಪನಿಯಲ್ಲ ವೈಯಕ್ತಿಕ ಆಸ್ತಿಯೂ ಅಲ್ಲ ಅದು ನಾಡಿನ ಸಂಸ್ಕೃತಿ ಸಾಹಿತ್ಯ ಮತ್ತು ನೆಲ ಜಲ ಇವುಗಳ ರಕ್ಷಣೆಗಾಗಿಯೇ ಹೊರತು ವ್ಯತಿಯೊಬ್ಬನ ಅವಕಾಶಗಳಿಗೆ ಅಲ್ಲಾ ಈಗಾಗಲೇ ಇಂತಹ ಮನಸ್ತಿತಿಯಿಂದಲೇ ರಾಜ್ಯಾಧ್ಯಕ್ಷರಾಗಿದ್ದ ಜೋಶಿಯವರನ್ನು ಪದಚ್ಯುತಗೊಳಿಸಾಗಿದೆ

ಅದಾಗ್ಯೂ ಸಿದ್ದಲಿಂಗಪ್ಪನವರು ದೇಣಿಗೆನೀಡಿದವರು ಮಾತ್ರ ಲೆಕ್ಕಕೇಳಬಹುದೇ ಹೊರತು ಉಳಿದವರು ಕೇಳುವಂತಿಲ್ಲ



ಎನ್ನುವುದು ದುರಹಂಕಾರದ ಪರಮಾವಧಿ ಇದನ್ನು ಖಂಡಿಸುತ್ತೇವೆ ಇವರ ಮಾತಿನಂತೆ ನಡೆಯುವುದಾದರೆ ಕಸಾಪ ಆಡಳಿತ ಮೈಸೂರು ಅರಸರ ವ್ಯಾಪ್ತಿಯಲ್ಲೇ ಇರಬೇಕು ಸರ್ ಎಂ ವಿ ಅವರು ಭವಿಷ್ಯದ ದೂರದೃಷ್ಟಿಯ ಫಲ ಈ ನಾಡಿನ ಹೆಮ್ಮೆಯಾಗಿ ಪರಿಷತ್ತು ಇದೆ ಇದೊಂದು ಸಾರ್ವಜನಿಕ ಸಂಸ್ಥೆ ಎನ್ನುವುದನ್ನು ಮಾನ್ಯರು ಮರೆತಿರುವಂತಿದೆ ದಯವಿಟ್ಟು ತಮ್ಮ ಹೇಳಿಕೆಯನ್ನು ವಾಪಸ್ ಪಡೆದು ಎಲ್ಲಾ ಕಸಾಪ ಸದಸ್ಯರ ಕ್ಷಮೆ ಕೇಳಬೇಕು ಎಂದು ಉಪನ್ಯಾಸಕ ಬಂದ್ರೆಹಳ್ಳಿ ಕುಮಾರ ಆಗ್ರಹಿಸಿದ್ದಾರೆ

ವೃದ್ದೆಯ ಕೊರಳಿನಲ್ಲಿದ್ದ ಚಿನ್ನದ ಸರ ಕದ್ದಿದ್ದ ಕಳ್ಳರ ಬಂಧನ

ಸೂರ್ಯಪ್ರಗತಿನ್ಯೂಸ್.ಕಾಂ

ಮಧುಗಿರಿ: ವೃದ್ಧೆಯ ಕೊರಳಿನಲ್ಲಿದ್ದ ಕರಿಮಣಿ ಸರ ಕದ್ದಿದ್ದ ಆಂಧ್ರ ಮೂಲದ ಇಬ್ಬರು ಕಳ್ಳರನ್ನು ತಾಲೂಕಿನ ಮಿಡಿಗೇಶಿ ಪೊಲೀಸರು ಬಂಧಿಸಿದ್ದಾರೆ.

ಐ.ಡಿ.ಹಳ್ಳಿ ಗ್ರಾಮಕ್ಕೆ ಹೋಗುವ ಜಮೀನಿನಲ್ಲಿ ಮನೆ ನಿರ್ಮಿಸಿಕೊಂಡು ಅಲ್ಲಿಯೇ ದನಕರುಗಳನ್ನು ಮೇಯಿಸುತ್ತಿರುವ ಸಂದರ್ಭದಲ್ಲಿ ಅಲ್ಲಿಗೆ ಬಂದ ಕಳ್ಳರಾದ ಗೋವಿಂದರಾಜು, ನಾಗರಾಜು ಎಂಬುವರು ವೃದ್ಧೆಯ ಬಾಯಿ ಮುಚ್ಚಿ ಚಿನ್ನದ ಗುಂಡುಗಳಿದ್ದ ಕರಿಮಣಿ ಸರವನ್ನು ಕಿತ್ತುಕೊಂಡು ಪರಾರಿಯಾಗಿದ್ದರು.

ಸಿಸಿ ಟಿವಿ ಆಧರಿಸಿ ಕೂಡಲೇ ಕಾರ್ಯಪ್ರವೃತ್ತರಾದ ಮಿಡಿಗೇಶಿ ಪೊಲೀಸರು ಘಟನೆ ನಡೆದ ಕೆಲವೇ ಗಂಟೆಗಳಲ್ಲಿ ಆರೋಪಿಗಳನ್ನು ಹೊಸಕೆರೆ ಐ.ಡಿ.ಹಳ್ಳಿ ಕ್ರಾಸ್‌ನಲ್ಲಿ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಬಂಧಿತರಿಂದ ಬಂಗಾರದ 40 ಗುಂಡುಗಳು, ಒಂದು ತಾಳಿಯನ್ನು ವಶಪಡಿಸಿಕೊಂಡು, ಆರೋಪಿಗಳನ್ನು



ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಮಟ್ಕಾ: ಬಂಧನ;– ಒಂದು ರೂಪಾಯಿಗೆ ಹತ್ತು ರೂಪಾಯಿನೀಡುವುದಾಗಿ ಅಮಾಯಕ ಜನರನ್ನು ವಂಚಿಸಿ ಹಣ ವಸೂಲಿ ಮಾಡುತ್ತಿದ್ದ ಮಟ್ಕಾ ಬೀಟರ್ ಆರ್. ಶಿವಣ್ಣ ಎಂಬಾತನನ್ನು ಮಿಡಿಗೇಶಿ ಪೊಲೀಸರು ಬಂಧಿಸಿದ್ದಾರೆ. ಬಂಧಿತನಿಂದ 4210 ರೂ. ಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಬಗ್ಗೆ ಪಿಎಸ್‌ಐ ರವೀಂದ್ರ ಅವರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ದೆಹಲಿಯ ಜಂತರ್ ಮಂತರ್‌ನಲ್ಲಿ ವಿದ್ಯಾರ್ಥಿಗಳು ನಡೆಸುತ್ತಿರುವ ಹೋರಾಟಕ್ಕೆ ಜಿಲ್ಲಾ ಕಾಂಗ್ರೆಸ್ ಬೆಂಬಲ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಕೇಂದ್ರದ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ ರಾಜೀನಾಮೆಗೆ ಒತ್ತಾಯಿಸಿ ದೆಹಲಿಯ ಜಂತರ್ ಮಂತರ್ ನಲ್ಲಿ ವಿದ್ಯಾರ್ಥಿಗಳು ನಡೆಸುತ್ತಿರುವ ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿ, ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಇಕ್ಬಾಲ್ ಅಹಮದ್ ನೇತೃತ್ವದಲ್ಲಿ ನಗರದ ಟೌನ್‌ಹಾಲ್‌ನ ಅಂಬೇಡ್ಕರ್ ಪ್ರತಿಮೆ ಮುಂಭಾಗದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು.

ಟೌನ್‌ಹಾಲ್ ಮುಂಭಾಗದ ಅಂಬೇಡ್ಕರ್ ಪ್ರತಿಮೆ ಮುಂಭಾಗದಲ್ಲಿ ಜಮಾವಣೆಗೊಂಡಿದ್ದ ನೂರಾರು ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಜಿ.ಚಂದ್ರಶೇಖರಗೌಡ, ದೇಶದಾದ್ಯಂತ ಕೇಂದ್ರ ಸರಕಾರದ ವೈಫಲ್ಯ ಮತ್ತು ನೀಟ್ ಪರೀಕ್ಷೆಯಲ್ಲಿ ಪ್ರತಿಭಾವಂತರಿಗೆ ಆಗಿರುವ ಅನ್ಯಾಯವನ್ನು ಖಂಡಸಿ ಪ್ರಚಾರ ಸಮಿತಿ ನೇತೃತ್ವದಲ್ಲಿ ಎನ್.ಎಸ್.ಯುಐ, ಯುವ ಕಾಂಗ್ರೆಸ್ ಹಾಗು ಎಲ್ಲಾ ಮಂಚೂಣಿ ಘಟಕಗಳ ಸಹಯೋಗದಲ್ಲಿ ಈ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ನೀಟ್ ವೈಫಲ್ಯದ ಹೊಣೆ ಹೊತ್ತು ಕೇಂದ್ರ ಶಿಕ್ಷಣ ಮಂತ್ರಿ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಬೇಕೆಂಬುದು ನಮ್ಮೆಲ್ಲರ ಬೇಡಿಕೆಯಾಗಿದೆ. ಸರಕಾರ ಇದೇ ಮೊಂಡತನವನ್ನು ಪ್ರದರ್ಶಿಸಿದರೆ ಮುಂದಿನ ದಿನಗಳಲ್ಲಿ ಮತ್ತಷ್ಟು ಉಗ್ರ ಪ್ರತಿಭಟನೆಯನ್ನು ಕಾಂಗ್ರೆಸ್ ಪಕ್ಷದವತಿಯಿಂದ ಕೈಗೊಳ್ಳಲಾಗುವುದು ಎಂದರು.

ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷರಾದ ಇಕ್ಬಾಲ್ ಅಹಮದ್ ಮಾತನಾಡಿ, ದೇಶದ ಯುವಜನರ ಭವಿಷ್ಯ ನಿರ್ಧರಿಸುವ ಒಂದು ನೀಟ್ ಪರೀಕ್ಷೆ ನಡೆಸಲು ಆಗದವರು ಇನ್ನೂ ದೇಶ ನಡೆಸಲು ಸಾಧ್ಯವೇ ?, ನೀಟ್ ಪರೀಕ್ಷೆ ಪ್ರಾರಂಭವಾದ ದಿನದಿಂದ ಇಲ್ಲಿಯವರೆಗೆ 12ಕ್ಕೂ ಹೆಚ್ಚು ಬಾರಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ. ಬಡವರ ಮಕ್ಕಳ ಬದಲು ಶ್ರೀಮಂತರ ಮಕ್ಕಳು ಡಾಕ್ಟರ್‌ಗಳಾಗಬೇಕೆಂಬ ಕಾರ್ಪೋರೇಟ್



ಮನಸ್ಥಿತಿಯ ಪರಿಣಾಮ ಇದಕ್ಕೆ ಕಾರಣ. ಮರು ಪರೀಕ್ಷೆಯಿಂದ ಪ್ರತಿಭಾವಂತರಿಗೆ ಅನ್ಯಾಯವಾಗಿದೆ. ಸುಮಾರು 22 ಜನ ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗಿದ್ದಾರೆ. ಇದುವರೆಗೂ ಪ್ರಧಾನಿ ಮೋದಿಯವರು ವಿದ್ಯಾರ್ಥಿಗಳೊಂದಿಗೆ ಮಾತನಾಡಿಲ್ಲ. ಇಷ್ಟು ದುರ್ಬಲ ಮನಸ್ಥಿತಿಯ ಪ್ರಧಾನಿಯನ್ನು ಈ ದೇಶ ಹಿಂದೆಂದು ಕಂಡಿಲ್ಲ. ಇದೇನಾ ನಿಮ್ಮ 56 ಇಂಚಿನ ಎದೆ. ಮೊದಲು ಈ ದೇಶದ ಭವಿಷ್ಯವಾಗಿರುವ ವಿದ್ಯಾರ್ಥಿಗಳ ಸಮಸ್ಯೆಗೆ ಸ್ಪಂದಿಸಿ, ಶಿಕ್ಷಣ ಮಂತ್ರಿಗಳ ರಾಜೀನಾಮೆ ಪಡೆಯಬೇಕು. ಇಲ್ಲದಿದ್ದಲ್ಲಿ ಮತ್ತಷ್ಟು ಹೋರಾಟವನ್ನು ತೀವ್ರಗೊಳಿಸಲಿದ್ದೇವೆ ಎಂದರು.

ನಮ್ಮ ನಾಯಕರಾದ ರಾಹುಲ್ ಗಾಂಧಿ ಅವರು ಪ್ರಧಾನಿಯವ ಮನೆಯ ಮುಂದೆ ವಿದ್ಯಾರ್ಥಿಗಳ ಪರ ಪ್ರತಿಭಟನೆ ನಡೆಸಿದರೇ ಅವರನ್ನು ಬಂಧಿಸುತ್ತೀರಿ, ಪೊಲೀಸ್ ಬಲದಿಂದ ವಿದ್ಯಾರ್ಥಿಗಳ ಹೋರಾಟವನ್ನು ಹತ್ತಿಕ್ಕುವ ನಿಮ್ಮ ಪ್ರಯತ್ನ ಎಂದಿಗೂ ಫಲ ನೀಡುವುದಿಲ್ಲ. ನೆರೆಯ ರಾಷ್ಟ್ರಗಳಲ್ಲಿ ಆಗಿರುವ ಬದಲಾವಣೆಗಳ ಕಡೆಗೆ ಒಮ್ಮೆ ಗಮನ ನೀಡಿ, ಯುವಜನರನ್ನು ಎದುರು ಹಾಕಿಕೊಂಡ ಯಾವ ಅಡಳಿತವೂ ಉಳಿದಿಲ್ಲ.ಮೊದಲು ಪ್ರತಿಭಟನಾ ನಿರತರ ಬೇಡಿಕೆಗಳನ್ನು ಈಡೇರಿಸಿ ಎಂದು ಇಕ್ಬಾಲ್ ಅಹಮದ್ ಆಗ್ರಹಿಸಿದರು.

ಮಾಜಿ ಶಾಸಕ ಡಾ.ಎಸ್. ರಫೀಕ್ ಅಹಮದ್ ಮಾತನಾಡಿ, ಪ್ರತಿಭಾವಂತರಿಗೆ ಅವಕಾಶಗಳು ಸಿಗಬೇಕೆಂಬ ಉದ್ದೇಶದಿಂದ ಸರಕಾರ 2013ರಲ್ಲಿ ಜಾರಿಗೆ ತಂದ ನೀಟ್ ಪರೀಕ್ಷೆಯ ಉದ್ದೇಶ ಸಂಪೂರ್ಣ ವಿಫಲವಾಗಿದೆ. ಪ್ರಧಾನಿಗಳು ಹಾಗೂ ಅವರ ಸಂಪುಟದ ಸಹದ್ಯೋಗಿಗಳಿಗೆ ಬಡವರ ಮಕ್ಕಳು ಡಾಕ್ಟರ್ ಆಗುವುದಕ್ಕಿಂತ ಶ್ರೀಮಂತರ ಮಕ್ಕಳು ಡಾಕ್ಟರ್ ಆಗುವುದು ಮುಖ್ಯ ಹಾಗಾಗಿ ಪ್ರಶ್ನೆ ಪ್ರತಿಕೆ ಸೋರಿಕೆ ಮಾಡಿ, ಪ್ರತಿಭಾವಂತರ ಹಕ್ಕುಗಳನ್ನು ಕಸಿಯುತ್ತಿದೆ. 2004 ರಿಂದ ಈ ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಕಳೆದ 12 ವರ್ಷಗಳಲ್ಲಿ ಹತ್ತಾರು ಬಾರಿ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿ, ನಕಲಿ ಡಾಕ್ಟರ್‌ಗಳು ಸೃಷ್ಟಿಯಾಗಿ, ಇಡೀ ದೇಶದ ಆರೋಗ್ಯ ವ್ಯವಸ್ಥೆಯ ಮೇಲೆ ದುಷ್ಪರಿಣಾಮ ಬೀರಿದೆ.ಹಾಗಾಗಿ ಕೇಂದ್ರ ಸರಕಾರ ಈ ದುಸ್ಥಿತಿಗೆ ಕಾರಣರಾದ ಮಂತ್ರಿಗಳ ರಾಜೀನಾಮೆ ಪಡೆಯಬೇಕು ಎಂಬುದು ನಮ್ಮ ಆಗ್ರಹವಾಗಿದೆ ಎಂದರು.

ಪ್ರತಿಭಟನೆಯಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ರಾಮಕೃಷ್ಣ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಫಯಾಜ್, ಮಹೇಶ್, ಕೆಂಪಣ್ಣ,ಗುರು ಪ್ರಸಾದ್, ವಿವಿಧ ಮಂಚೂಣಿ ಘಟಕಗಳ ಮುಖಂಡರಾದ ನಿಂಗರಾಜು, ಕುಮಾರಸ್ವಾಮಿ, ಅನಿಲ್‌ಕುಮಾರ್, ಸಂಜೀವಕುಮಾರ್, ಅಂಬರೀಷ್,ಸುಜಾತ,ಶ್ರೀನಿವಾಸಕುಮಾರ್, ಚಕ್ರವರ್ತಿ ಪ್ರಕಾಶ್, ಹೆಬ್ಬೂರು ಶ್ರೀನಿವಾಸಮೂರ್ತಿ, ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಕೆ.ಎನ್. ರಾಜಣ್ಣ ಅವರಿಗೆ ಸಚಿವ ಸ್ಥಾನ ನೀಡಲು ಮನವಿ

ಸೂರ್ಯಪ್ರಗತಿನ್ಯೂಸ್.ಕಾಂ

ಮಧುಗಿರಿ: ನಗರದಲ್ಲಿರುವ ಕಾಂಗ್ರೆಸ್ ಭವನದಲ್ಲಿ ಕೆಪಿಸಿಸಿ ಅಧ್ಯಕ್ಷರಾದ ಬಿ.ಕೆ. ಹರಿಪ್ರಸಾದ್ ಅವರನ್ನು ಕೆಪಿಸಿಸಿ ಸದಸ್ಯರಾದ ಸಿದ್ದಾಪುರ ರಂಗಶಾಮಯ್ಯ ಭೇಟಿ ಮಾಡಿದರು.

ಇದೇ ವೇಳೆ ಶಾಸಕರಾದ ಕೆ.ಎನ್ ರಾಜಣ್ಣ ಅವರಿಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕೆಂದು ಆಗ್ರಹಿಸಿ ಕೆಪಿಸಿಸಿ ಸದಸ್ಯರಾದ ಸಿದ್ದಾಪುರ ರಂಗಶ್ಯಾಮಯ್ಯ ಅವರು ಕೆಪಿಸಿಸಿ ಅಧ್ಯಕ್ಷರಾದ ಬಿ.ಕೆ. ಹರಿಪ್ರಸಾದ್ ಅವರಿಗೆ ಮನವಿ ಸಲ್ಲಿಸಿದರು.

ಶಾಸಕರಾದ ಕೆ.ಎನ್. ರಾಜಣ್ಣ ಅವರು ಶಾಸಕರಾಗಿ ಮಧುಗಿರಿ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಕ್ಷೇತ್ರದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ.



ಹಾಗೆಯೇ ಕಳೆದ ಹಲವು ವರ್ಷಗಳಿಂದ ತುಮಕೂರು ಡಿಸಿಸಿ ಬ್ಯಾಂಕ್ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದು, ತುಮಕೂರು ಜಿಲ್ಲೆಯ 11 ವಿಧಾನ ಸಭೆ ಕ್ಷೇತ್ರಗಳಲ್ಲೂ ಸಾಕಷ್ಟು ಪ್ರಭಾವ ಇರುವ ನಾಯಕರಾಗಿದ್ದು, ಅವರಿಗೆ ಸಚಿವ ಸ್ಥಾನ ನೀಡಿದರೆ ಮುಂದಿನ ಚುನಾವಣೆಗಳಲ್ಲಿ ಪಕ್ಷಕ್ಕೆ ಮತ್ತಷ್ಟು ಬಲ ಬರುತ್ತದೆ. ಇಲ್ಲದಿದ್ದರೆ ಮುಂದಿನ ವಿಧಾನ ಸಭಾ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಕಾಂಗ್ರೆಸ್ ನೆಲಕಚ್ಚುವುದರಲ್ಲಿ ೦ು ೨ಾ ವ್ರ ದ್ ೀ ಅನುಮಾನವಿಲ್ಲವೆಂದು ಕಾಂಗ್ರೆಸ್ ಭವನ ಟ್ರಸ್ಟ್ ತಿಳಿಸಿದ್ದಾರೆ. ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡಿದರೆ ಇನ್ನಷ್ಟು ಹೆಚ್ಚಿನ ಅಭಿವೃದ್ಧಿ ಕಾರ್ಯಗಳನ್ನು ಕೆ.ಎನ್. ರಾಜಣ್ಣ ಅವರು ಮಾಡಲಿದ್ದಾರೆ. ಈ ನಿಟ್ಟಿನಲ್ಲಿ ಕೆ.ಎನ್. ರಾಜಣ್ಣ ಅವರಿಗೆ ಸಚಿವ ಸ್ಥಾನ ನೀಡಬೇಕು. ಶಾಸಕ ರಾಜಣ್ಣರಿಗೆ ಇಲ್ಲವೇ ಅವರ ಪುತ್ರ ವಿಧಾನ ಪರಿಷತ್ ಸದಸ್ಯ ರಾಜೇಂದ್ರ ರಾಜಣ್ಣ ಅವರಿಗಾದರೂ ಸಚಿವ ಸ್ಥಾನ ನೀಡಬೇಕೆಂದು ಮಧುಗಿರಿ ವಿಧಾನ ಸಭಾ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಒತ್ತಾಯವಾಗಿದೆ ಎಂದು ಮನವಿ ಸಲ್ಲಿಸಿ ಒತ್ತಾಯಿಸಿದ್ದಾರೆ.

ಶಸ್ತ್ರಚಿಕಿತ್ಸೆಯಿಲ್ಲದೆ ಕ್ಯಾನ್ಸರ್ ರಹಿತ ಥೈರಾಯ್ಡ್ ಗಡ್ಡೆ ತೆರವುಗೊಳಿಸಿ ಅಪರೂಪದ ಸಾಧನೆ ಮಾಡಿದ ಗ್ಲೆನೆಗಲ್ಸ್ ಬಿಜಿಎಸ್ ಆಸ್ಪತ್ರೆ

– ಥೈರಾಯ್ಡ್ ಗ್ರಂಥಿಗೆ ಹಾನಿಯಾಗದಂತೆ, ಶಸ್ತ್ರಚಿಕಿತ್ಸೆಯಿಲ್ಲದೆ ಸೂಜಿ ಆಧಾರಿತ ವಿನೂತನ ಚಿಕಿತ್ಸೆಯ ಮೂಲಕ ಗಡ್ಡೆಯನ್ನು ತೆರವುಗೊಳಿಸಿ, ರೋಗಿ ವೇಗವಾಗಿ ಚೇತರಿಸಿಕೊಳ್ಳಲು ನೆರವಾದ ವೈದ್ಯರ ತಂಡ –

ಬೆಂಗಳೂರು, 24 ಜುಲೈ 2026: ಬೆಂಗಳೂರಿನ ಕೆಂಗೇರಿಯಲ್ಲಿರುವ ಪ್ರತಿಷ್ಠಿತ ಗ್ಲೆನೆಗಲ್ಸ್ ಬಿಜಿಎಸ್ ಆಸ್ಪತ್ರೆಯ (ಫೋರ್ಟಿಸ್ ಹೆಲ್ತ್‌ಕೇರ್ ನೆಟ್ ವರ್ಕ್) ವೈದ್ಯರು ಥೈರಾಯ್ಡ್ ರೋಗಿಗಳ ಆರೈಕೆಯಲ್ಲಿ ವಿನೂತನ ಸಾಧನೆ ಮಾಡಿದ್ದು, 41 ವರ್ಷದ ಮಹಿಳೆಯೊಬ್ಬರ ಕುತ್ತಿಗೆಯಲ್ಲಿದ್ದ ಕ್ಯಾನ್ಸರ್ ರಹಿತ ಥೈರಾಯ್ಡ್ ಗಡ್ಡೆಯನ್ನು ಯಾವುದೇ ಶಸ್ತ್ರಚಿಕಿತ್ಸೆಯಿಲ್ಲದೆ, ಕೇವಲ ಸೂಜಿಯ ಆಧಾರಿತ ವಿನೂತನ ತಂತ್ರಜ್ಞಾನದ ಮೂಲಕ ಯಶಸ್ವಿಯಾಗಿ ತೆರವುಗೊಳಿಸಿದ್ದಾರೆ. ಈ ಮೂಲಕ ಅಪರೂಪದ ಸಾಧನೆ ಮಾಡಿದ್ದಾರೆ.

ಆಸ್ಪತ್ರೆಯ ಕನ್ಸಲ್ಟೆಂಟ್ ಇಂಟರ್ವೆನ್ಷನಲ್ ರೇಡಿಯಾಲಜಿಸ್ಟ್ ಡಾ. ನವೀನ್ ಚಂದ್ರಶೇಖರ್ ಅವರ ನೇತೃತ್ವದ ವೈದ್ಯಕೀಯ ತಂಡವು ಈ ಅಪರೂಪದ ಸಾಧನೆ ಮಾಡಿದೆ. ಗಡ್ಡೆಗೆ ರಕ್ತ ಸರಬರಾಜನ್ನು ಸಂಪೂರ್ಣವಾಗಿ ತಡೆಯುವ ಡೈರೆಕ್ಟ್ ಪಂಕ್ಚರ್ ಎಂಬೋಲೈಸೇಶನ್ ಹಾಗೂ ನಿಯಂತ್ರಿತ ಶಾಖದ ಮೂಲಕ ಗಡ್ಡೆಯನ್ನು ನಾಶಪಡಿಸುವ ಮೈಕ್ರೋವೇವ್ ಅಬ್ಲೇಶನ್ ಎಂಬ ಎರಡೂ ವೈದ್ಯಕೀಯ ವಿಧಾನಗಳನ್ನು ಒಟ್ಟಿಗೆ (ಒಂದೇ ಹಂತದಲ್ಲಿ) ಸಂಯೋಜಿಸಿ ಚಿಕಿತ್ಸೆ ನೀಡಿರುವುದು ಭಾರತದ ವೈದ್ಯಕೀಯ ರಂಗದಲ್ಲೇ ಮೊದಲ ಪ್ರಕರಣವಾಗಿದೆ.

ವೃತ್ತಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ 41 ವರ್ಷದ ಮಹಿಳೆಗೆ ಮೂರು ವರ್ಷಗಳ ಹಿಂದೆ ಕುತ್ತಿಗೆಯ ಬಲಭಾಗದಲ್ಲಿ ನೋವಿಲ್ಲದ ಸಣ್ಣ ಗಡ್ಡೆ ಕಾಣಿಸಿಕೊಂಡಿತ್ತು. ಪ್ರಾರಂಭಿಕ ತಪಾಸಣೆಯಲ್ಲಿ ಅದು ಕ್ಯಾನ್ಸರ್ ರಹಿತ ಗಡ್ಡೆ ಎಂಬುದು ಖಚಿತವಾಗಿತ್ತಾದರೂ, ದಿನಕಳೆದಂತೆ ಅದರ ಗಾತ್ರ ಬೆಳೆಯುತ್ತಾ ಹೋಯಿತು. ಇತ್ತೀಚೆಗೆ ಗ್ಲೆನೆಗಲ್ಸ್ ಬಿಜಿಎಸ್ ಆಸ್ಪತ್ರೆಯಲ್ಲಿ ಸುಧಾರಿತ ತಪಾಸಣೆಗೆ ಒಳಪಡಿಸಿದಾಗ, ಗಡ್ಡೆಯು ಸುಮಾರು 16 ಕ್ಯೂಬಿಕ್ ಸೆಂಟಿಮೀಟರ್ ನಷ್ಟು ಬೃಹತ್ತಾಗಿ ಬೆಳೆದಿರುವುದು ಹಾಗೂ ಅದಕ್ಕೆ ಅಸಾಮಾನ್ಯವಾಗಿ ದೊಡ್ಡ ರಕ್ತನಾಳವೊಂದು ರಕ್ತ ಪೂರೈಸುತ್ತಿರುವುದು ಪತ್ತೆಯಾಯಿತು. ಗಡ್ಡೆಗೆ ಹೆಚ್ಚಿನ ರಕ್ತಸಂಚಾರವಿದ್ದುದರಿಂದ, ಕೇವಲ ಸಾಂಪ್ರದಾಯಿಕ ಶಾಖ ಆಧಾರಿತ ಚಿಕಿತ್ಸೆಯಿಂದ ಅದನ್ನು ಕರಗಿಸುವುದು ಕಷ್ಟವಿತ್ತು. ರಕ್ತದ ಓಟವು ಚಿಕಿತ್ಸೆಯ ಪರಿಣಾಮವನ್ನು ತಗ್ಗಿಸಿ, ಭವಿಷ್ಯದಲ್ಲಿ ಗಡ್ಡೆ ಮತ್ತೆ ಮರುಕಳಿಸುವ ಅಪಾಯವಿತ್ತು. ಈ ಸವಾಲನ್ನು ಮೆಟ್ಟಿಲಾಗಿ ಸ್ವೀಕರಿಸಿದ ಡಾ. ನವೀನ್ ಚಂದ್ರಶೇಖರ್ ನೇತೃತ್ವದ ಇಂಟರ್ವೆನ್ಷನಲ್ ರೇಡಿಯಾಲಜಿ ತಂಡವು, ಮೊದಲು ಗಡ್ಡೆಯ ರಕ್ತಸಂಚಾರವನ್ನು ಕಡಿತಗೊಳಿಸಿ, ತಕ್ಷಣವೇ ಮೈಕ್ರೋವೇವ್ ರೇಡಿಯೇಶನ್ ಮೂಲಕ ಗಡ್ಡೆಯನ್ನು ಸಂಪೂರ್ಣವಾಗಿ ನಾಶಪಡಿಸುವಲ್ಲಿ ಯಶಸ್ವಿಯಾಗಿದೆ. ಶಸ್ತ್ರಚಿಕಿತ್ಸೆಯಿಲ್ಲದೆ ಚಿಕಿತ್ಸೆ ನೀಡಿರುವುದರಿಂದ ಥೈರಾಯ್ಡ್ ಗ್ರಂಥಿಗೆ ಯಾವುದೇ ಹಾನಿಯಾಗದೇ, ರೋಗಿಯು ಶೀಘ್ರವಾಗಿ ಚೇತರಿಸಿಕೊಳ್ಳಲು ನೆರವಾಗಿದೆ.

ಸಾಮಾನ್ಯವಾಗಿ ಇಂತಹ ಸಂಕೀರ್ಣ ಚಿಕಿತ್ಸೆಗಳಿಗೆ ಪ್ರತ್ಯೇಕ ಕ್ಯಾಥೆಟರ್‌ಗಳು ಹಾಗೂ ರೇಡಿಯೇಶನ್ ಪ್ರಯೋಗಾಲಯಗಳ ಅಗತ್ಯವಿರುತ್ತದೆ. ಆದರೆ, ಈ ಚಿಕಿತ್ಸೆಯನ್ನು ಕೇವಲ ಸಾಮಾನ್ಯ ಖಗಿ ಕ್ಯಾನ್ಯುಲಾ ಬಳಸಿ, ಅಲ್ಟ್ರಾಸೌಂಡ್ ಯಂತ್ರದ ಮಾರ್ಗದರ್ಶನದಲ್ಲೇ ಪೂರ್ಣಗೊಳಿಸಲಾಗಿದೆ. ಇದರಿಂದ ವಿಶೇಷ ಉಪಕರಣಗಳ ಅಗತ್ಯತೆ ತಪ್ಪಿದ್ದಲ್ಲದೆ, ಚಿಕಿತ್ಸೆಯ ಸಮಯವೂ ಕಡಿಮೆಯಾಯಿತು ಮತ್ತು ರೋಗಿ ರೇಡಿಯೇಷನ್ ಅಪಾಯಕ್ಕೆ ಒಳಗಾಗುವುದು ತಪ್ಪಿತು. ಲೋಕಲ್ ಅನಸ್ತೇಶಿಯಾ ನೀಡಿ ಕೇವಲ 90 ನಿಮಿಷಗಳಲ್ಲಿ ಈ ಚಿಕಿತ್ಸೆಯನ್ನು ಪೂರ್ಣಗೊಳಿಸಲಾಯಿತು. ಚಿಕಿತ್ಸೆಯ ಉದ್ದಕ್ಕೂ ರೋಗಿಯು ಎಚ್ಚರವಾಗಿಯೇ ಇದ್ದರು. ಯಾವುದೇ ಶಸ್ತ್ರಚಿಕಿತ್ಸೆ ಇಲ್ಲದಿರುವುದರಿಂದ ದೇಹದ ಮೇಲೆ ಯಾವುದೇ ಹೊಲಿಗೆ ಅಥವಾ ಗಾಯದ ಕಲೆಗಳು ಉಂಟಾಗಲಿಲ್ಲ. ಹಾಗಾಗಿ, ಚಿಕಿತ್ಸೆ ಮುಗಿದ ತಕ್ಷಣವೇ (ಅದೇ ದಿನ) ರೋಗಿಯನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಯಿತು.



ವರದಿಯ ಪ್ರಕಾರ, ಚಿಕಿತ್ಸೆಯ ನಂತರ 16 ಕ್ಯೂಬಿಕ್ ಸೆಂಟಿಮೀಟರ್‌ನಷ್ಟಿದ್ದ ಗಡ್ಡೆಯ ಗಾತ್ರವು ಕೇವಲ 3 ಕ್ಯೂಬಿಕ್ ಸೆಂಟಿಮೀಟರ್ ಗೆ ಕಡಿಮೆಯಾಗಿದೆ. ಕುತ್ತಿಗೆಯಲ್ಲಿದ್ದ ಗಡ್ಡೆಯು ಸಂಪೂರ್ಣವಾಗಿ ಮಾಯವಾಗಿದ್ದು, ರೋಗಿಯು ಯಾವುದೇ ಅಡ್ಡಪರಿಣಾಮಗಳಿಲ್ಲದೆ ಪೂರ್ಣ ಪ್ರಮಾಣದಲ್ಲಿ ಚೇತರಿಸಿಕೊಂಡಿದ್ದಾರೆ.

ಪ್ರಕರಣದ ಕುರಿತು ವಿವರಗಳನ್ನು ನೀಡಿದ ಗ್ಲೆನೆಗಲ್ಸ್ ಬಿಜಿಎಸ್ ಆಸ್ಪತ್ರೆಯ ಕನ್ಸಲ್ಟೆಂಟ್ ಇಂಟರ್ವೆನ್ಷನಲ್ ರೇಡಿಯಾಲಜಿಸ್ಟ್ ಡಾ. ನವೀನ್ ಚಂದ್ರಶೇಖರ್ ಅವರು, "ಕ್ಯಾನ್ಸರ್ ರಹಿತ ಥೈರಾಯ್ಡ್ ಗಡ್ಡೆಗಳಿಗೆ ಮೈಕ್ರೋವೇವ್ ಅಬ್ಲೇಶನ್ ಎಂಬುದು ಈಗಾಗಲೇ ಚಾಲ್ತಿಯಲ್ಲಿರುವ ಯಶಸ್ವಿ ಚಿಕಿತ್ಸೆಯಾಗಿದೆ. ಆದರೆ, ಈ ರೋಗಿಯ ಗಡ್ಡೆಗೆ ಅಸಾಮಾನ್ಯವಾಗಿ ದೊಡ್ಡ ರಕ್ತನಾಳವೊಂದು ರಕ್ತ ಪೂರೈಸುತ್ತಿತ್ತು. ನಾವು ಕೇವಲ ಶಾಖ ಆಧಾರಿತ ಚಿಕಿತ್ಸೆಯನ್ನು ನೀಡಿದ್ದರೆ, ಅಧಿಕ ರಕ್ತಸಂಚಾರವು ಅದರ ಪರಿಣಾಮವನ್ನು ತಗ್ಗಿಸಿ, ಗಡ್ಡೆ ಮತ್ತೆ ಮರುಕಳಿಸುವ ಸಾಧ್ಯತೆಯನ್ನು ಹೆಚ್ಚಿಸುತ್ತಿತ್ತು. ಹೀಗಾಗಿ, ನಾವು ಮೊದಲು ಗಡ್ಡೆಗೆ ತೆರಳುವ ರಕ್ತ ಪೂರೈಕೆಯನ್ನು ಸ್ಥಗಿತಗೊಳಿಸಿ, ತಕ್ಷಣವೇ ಅದೇ ಚಿಕಿತ್ಸೆಯ ವೇಳೆ ಮೈಕ್ರೋವೇವ್ ಅಬ್ಲೇಶನ್ ಮಾಡಲು ನಿರ್ಧರಿಸಿದೆವು. ಅಧಿಕ ರಕ್ತಸಂಚಾರವಿದ್ದ ಕ್ಯಾನ್ಸರ್ ರಹಿತ ಥೈರಾಯ್ಡ್ ಗಡ್ಡೆಗೆ ಈ ಎರಡೂ ತಂತ್ರಜ್ಞಾನಗಳನ್ನು ಯಶಸ್ವಿಯಾಗಿ ಸಂಯೋಜಿಸಿ ಚಿಕಿತ್ಸೆ ನೀಡಿರುವುದು ಇದೇ ಮೊದಲ ಬಾರಿಯಾಗಿದೆ" ಎಂದು ಹೇಳಿದರು.ಅವರು ಮುಂದುವರಿದು ಮಾತನಾಡಿ, "ಈ ಚಿಕಿತ್ಸೆಯ ಮತ್ತೊಂದು ಪ್ರಮುಖ ಅನುಕೂಲವೆಂದರೆ, ಇದನ್ನು ವಿಶೇಷ ಕ್ಯಾಥೆಟರ್ ಗಳು ಅಥವಾ ಕ್ಯಾಥೆಟರೈಸೇಶನ್ ಪ್ರಯೋಗಾಲಯಗಳ ಅಗತ್ಯವಿಲ್ಲದೇ, ಕೇವಲ ಸಾಮಾನ್ಯ ಖಗಿ ಕ್ಯಾನ್ಯುಲಾ ಬಳಸಿ ಸಂಪೂರ್ಣವಾಗಿ ಅಲ್ಟ್ರಾಸೌಂಡ್ ಮಾರ್ಗದರ್ಶನದಲ್ಲೇ ಮಾಡಲಾಗಿದೆ. ಇದು ಪ್ರಕ್ರಿಯೆಯನ್ನು ಸರಳಗೊಳಿಸುವುದರ ಜೊತೆಗೆ, ದುಬಾರಿ ಉಪಕರಣಗಳ ಅಗತ್ಯವನ್ನು ತಪ್ಪಿಸಿ, ರೋಗಿಯು ರೇಡಿಯೇಷನ್ ಗೆ ಒಳಗಾಗುವುದನ್ನು ತಪ್ಪಿಸಿದೆ. ಇದರೊಂದಿಗೆ, ಆರೋಗ್ಯಕರವಾದ ಥೈರಾಯ್ಡ್ ಗ್ರಂಥಿಗೆ ಹಾನಿಯಾಗದಂತೆ ಕಾಯ್ದುಕೊಳ್ಳಲು, ಶಸ್ತ್ರಚಿಕಿತ್ಸೆಯನ್ನು ತಪ್ಪಿಸಲು ಮತ್ತು ರೋಗಿ ವೇಗವಾಗಿ ಚೇತರಿಸಿಕೊಳ್ಳಲು ಸಾಧ್ಯವಾಗಿದೆ. ಈ ಚಿಕಿತ್ಸಾ ವಿಧಾನವು ನಿರ್ದಿಷ್ಟವಾಗಿ ಆಯ್ಕೆ ಮಾಡಿದ ರೋಗಿಗಳಿಗೆ ಮಾತ್ರ ಸೂಕ್ತವಾಗಿದ್ದರೂ, ಮುಂಬರುವ ದಿನಗಳಲ್ಲಿ ಸುಧಾರಿತ ಥೈರಾಯ್ಡ್ ಚಿಕಿತ್ಸೆಯನ್ನು ಪ್ರತಿಯೊಬ್ಬರಿಗೂ ಸುಲಭವಾಗಿ ಮತ್ತು ಕಡಿಮೆ ವೆಚ್ಚದಲ್ಲಿ ಸಿಗುವಂತೆ ಮಾಡುವ ಸಾಮರ್ಥ್ಯ ಹೊಂದಿದೆ" ಎಂದು ಹೇಳಿದರು.

ರೋಗಿಯು ತಮ್ಮ ಅನಿಸಿಕೆ ಹಂಚಿಕೊಳ್ಳುತ್ತಾ ಮಾತನಾಡಿ, "ನನ್ನ ಕುತ್ತಿಗೆಯಲ್ಲಿ ಗಡ್ಡೆಯನ್ನು ಮೊದಲ ಬಾರಿಗೆ ಗಮನಿಸಿದಾಗ, ಮುಂದಿನ ದಿನಗಳಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಬೇಕಾಗಬಹುದೇನೋ ಎಂದು ಭಯವಾಗಿತ್ತು. ಆದರೆ ಡಾ. ನವೀನ್ ಹಾಗೂ ಅವರ ತಂಡದವರು ನನಗೆ ಚಿಕಿತ್ಸೆಯ ಪ್ರಕ್ರಿಯೆಯನ್ನು ಸ್ಪಷ್ಟವಾಗಿ ವಿವರಿಸಿ ಧೈರ್ಯ ತುಂಬಿದರು. ಶಸ್ತ್ರಚಿಕಿತ್ಸೆಯನ್ನೇ ತಪ್ಪಿಸಬಹುದು ಎಂದು ತಿಳಿದು ನನಗೆ ಸಮಾಧಾನವಾಯಿತು, ಜೊತೆಗೆ ನಾನು ನಿರೀಕ್ಷಿಸಿದ್ದಕ್ಕಿಂತ ಅತ್ಯಂತ ವೇಗವಾಗಿ ಚೇತರಿಸಿಕೊಂಡೆ. ಇಂದು ನನ್ನ ಕುತ್ತಿಗೆಯಲ್ಲಿದ್ದ ಗಡ್ಡೆ ಸಂಪೂರ್ಣವಾಗಿ ಮಾಯವಾಗಿದೆ. ಅತ್ಯುತ್ತಮ ಆರೈಕೆ ನೀಡಿದ ಗ್ಲೆನೆಗಲ್ಸ್ ಬಿಜಿಎಸ್ ಆಸ್ಪತ್ರೆಯ ವೈದ್ಯಕೀಯ ತಂಡಕ್ಕೆ ನಾನು ಕೃತಜ್ಞಳಾಗಿದ್ದೇನೆ" ಎಂದರು.

ಬೆಂಗಳೂರಿನ ಕೆಂಗೇರಿಯಲ್ಲಿರುವ ಗ್ಲೆನೆಗಲ್ಸ್ ಬಿಜಿಎಸ್ ಆಸ್ಪತ್ರೆಯ ಮುಖ್ಯ ಕಾರ್ಯಾಚರಣೆ ಅಧಿಕಾರಿ (ಸಿಓಓ) ರವಿ ಬಾಗಲಿ ಮಾತನಾಡಿ, "ಈ ಯಶಸ್ಸು ಗ್ಲೆನೆಗಲ್ಸ್ ಬಿಜಿಎಸ್ ಆಸ್ಪತ್ರೆಯ ವೈದ್ಯಕೀಯ ಶ್ರೇಷ್ಠತೆ ಮತ್ತು ಹೊಸ ಆವಿಷ್ಕಾರದ ಕಡೆಗಿನ ಬದ್ಧತೆಯನ್ನು ತೋರಿಸುತ್ತದೆ. ಈ ಅಪರೂಪದ ಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಿರುವುದು ನಮ್ಮ ಇಂಟರ್ವೆನ್ಷನಲ್ ರೇಡಿಯಾಲಜಿ ತಂಡದ ಕೌಶಲ್ಯಕ್ಕೆ ಸಾಕ್ಷಿಯಾಗಿದೆ. ಶಸ್ತ್ರಚಿಕಿತ್ಸೆಯ ಅಗತ್ಯವನ್ನು ಕಡಿಮೆ ಮಾಡಿ, ರೋಗಿಗಳಿಗೆ ಉತ್ತಮ ಆರೋಗ್ಯ ಫಲಿತಾಂಶ ನೀಡುವ ಸುಧಾರಿತ ಚಿಕಿತ್ಸೆಗಳನ್ನು ತರುವುದೇ ನಮ್ಮ ಮುಖ್ಯ ಗುರಿಯಾಗಿದೆ. ನಮ್ಮ ರೋಗಿಗಳಿಗೆ ಹೆಚ್ಚು ಸುರಕ್ಷಿತ, ನಿಖರ ಹಾಗೂ ಸುಲಭವಾಗಿ ದೊರೆಯುವ ಜಾಗತಿಕ ಮಟ್ಟದ ಚಿಕಿತ್ಸಾ ಆಯ್ಕೆಗಳನ್ನು ಒದಗಿಸಲು ನಾವು ಎಂದಿಗೂ ಬದ್ಧರಾಗಿದ್ದೇವೆ" ಎಂದು ಹೇಳಿದರು.

ದ್ವಿತೀಯ ಪಿಯುಸಿ ನಲ್ಲಿ ಶೇಕಡ 80ಕ್ಕಿಂತ ಹೆಚ್ಚು ಅಂಕ ಗಳನ್ನು ಪಡೆದಿರುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ



ಪಾವಗಡ, ತೇಜಸ್ ಚಾರಿಟಬಲ್ ಎಜುಕೇಶನಲ್ ಟ್ರಸ್ಟ್ ಇವರ ಆಶ್ರಯದಲ್ಲಿ 2025,26ನೇ ಸಾಲಿನ ದ್ವಿತೀಯ ಪಿಯುಸಿ ನಲ್ಲಿ ಶೇಕಡ 80ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ಶನಿವಾರ ಪಾವಗಡದಲ್ಲಿರುವ ತೇಜಸ್ ಹೋಟೆಲ್ ನಲ್ಲಿ ಹಮ್ಮಿಕೊಂಡಿದ್ದರು. ಮಕ್ಕಳಲ್ಲಿ ವಿದ್ಯೆಯಿಂದ ವಂಚಿತರಾಗದೆ ಮತ್ತು ಬಡತನದಿಂದ ವಿದ್ಯೆಗೆ ಹಿಂಜರಿಯದೆ ಮುಂದಿನ ದಿನಗಳಲ್ಲಿ ತಮ್ಮ ಭವಿಷ್ಯದ ಬೆಳವಣಿಗೆಗಾಗಿ ವಿದ್ಯೆಯನ್ನು ಉನ್ನತಮಟ್ಟದ ಶಿಖರಕ್ಕೆ ಕರೆದೊಯ್ಯಲು ದಾರಿದೀಪವಾಗುವುದೆಂದು ಟ್ರಸ್ಟ್ ಕಾರ್ಯದರ್ಶಿ ಗಾಯತ್ರಿ ಬಾಯ್ ಶಂಕರ್ ಮೂರ್ತಿ ತಿಳಿಸಿದರು. ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಬಯಸಿದರೆ ಸಿಇಟಿ ಕೋಚ್ ಕೇಂದ್ರವನ್ನು ಸ್ಥಾಪಿಸಲು ನಿರ್ಣಯಿಸಿಕೊಂಡಿರುವುದಾಗಿ ತಿಳಿಸಿದ ಅವರು ನನ್ನ ಸೇವ ಕಾರ್ಯಕ್ರಮಗಳಿಗೆ ಮುನ್ನಡೆಸಲು ಪ್ರೇರಣೆಯಾಗಿ ತಮ್ಮ ಮನೆಯವರಾದ ಶಂಕರ್ ಮೂರ್ತಿಯವರು ಪ್ರೋತ್ಸಾಹ ಮಾತಿನಲ್ಲಿ ಹೇಳಲಾಗದ ಮೆಚ್ಚುಗೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಚಿಕ್ಕಂದಿನಲ್ಲಿ ನನ್ನ ಮಕ್ಕಳಿಗಾಗಿ ಎಷ್ಟು ಕಷ್ಟಪಟ್ಟು ಕೋಚ್ ಸೆಂಟರ್ ಗಳಿಗೆ ಅಲೆದಾಡಿ ಇನ್ನು ಮುಂದೆ ಯಾವ ವಿದ್ಯಾರ್ಥಿ ಈ ರೀತಿ ಅಲೆದಾಡಬಾರದೆಂದು ಮುಂದಾಲತ್ವವಹಿಸಿ ಈ ನಿರ್ಣಯಕ್ಕೆ ಬಂದಿರುವುದಾಗಿ ಅವರು ತಿಳಿಸಿದರು. 98 ಜನ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಪ್ರೋತ್ಸಾಹ ಧನವನ್ನು ಅರ್ಪಿಸಿದರು. ಇದೇ ಸಂದರ್ಭದಲ್ಲಿ ಮಾಜಿ ಶಾಸಕರು ಸೋಮಲನಾಯಕ್, ಸದಸ್ಯರಾದ ಹರ್ಷಿತ ತೇಜಸ್ ನಾಗರಾಜ್ ನಾಯಕ್ ದೇವೇಂದ್ರ ನಾಯಕ್ ಮಂಜುನಾಥ್ ಮತ್ತು ವಿದ್ಯಾರ್ಥಿಗಳ ಪೋಷಕರು ಈ ಸಂದರ್ಭದಲ್ಲಿ ಹಾಜರಿದ್ದರು.

ಬೇಡ BRO ಡ್ರಗ್ಸ್; ಬೇಕು BRO ಲೈಫ್; ಸುರಪುರ ಡಿವೈಎಸ್ಪಿ

ಸೂರ್ಯಪ್ರಗತಿನ್ಯೂಸ್.ಕಾಂ

ಸುರಪುರು ಪೊಲೀಸ್ ಠಾಣೆ ವತಿಯಿಂದ ಶ್ರೀ ಕಮಲ ಕಿಶೋರ್ ಗೋವರ್ಧನ ದಾಸ್ ಲಡ್ಡ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಜಾವೀದ್ ಇನಮಾದಾರ್ ಡಿವೈಎಸ್ಪಿ ಸುರಪುರ ರವರು ಡ್ರಗ್ಸ್ ಗೆ ಬೇಡ ಎನ್ನಿ ಅಮಲು ಬರಿಸುವ ಮಾದಕ ವಸ್ತುಗಳ ಸೇವನೆಯಿಂದ ಮನುಷ್ಯ ಅನೇಕ ದೈಹಿಕ ಮತ್ತು ಮಾನಸಿಕ ಕಾಯಿಲೆಗೆ ಒಳಗಾಗಿ ತನ್ನ ಜೀವನವನ್ನೇ ಕಳೆದುಕೊಳ್ಳುತ್ತಾನೆ ಹಾಗಾಗಿ ಇಂದಿನ ಯುವಕರೆಲ್ಲರೂ ಸೇರಿ ಡ್ರಗ್ಸ್ ಗೆ ಬೇಡ ಎನ್ನೋಣ ಯುವಕರನ್ನು ಮಾದಕ ವ್ಯಾಸನದತ್ತ ಹೋಗದಂತೆ ತಡೆಯಲು ಹಮ್ಮಿಕೊಂಡಿರುವ ಈ ಅಭಿಯಾನವು ಯುವಕರಿಗೆ ಬೇಡ ಎನ್ನುವುದನ್ನು ಹೇಳಲು ಧೈರ್ಯ ತುಂಬುವ ವಿನೂತನ ಪ್ರಯತ್ನವಾಗಿದೆ ಗಾಂಜಾ ಅಫೀಮು ಹೆರಾಯಿನ್ ಕೊಕೇನ್ ಹಾಗೂ ಸಿಂಥೆಟಿಕ್ ಮಾದಕ ವಸ್ತುಗಳ ಸೇವನೆ ಮತ್ತು ಸಾಗಾಣಿಕೆ ಎರಡು ಕಾನೂನು ಬಾಹಿರ ಕೃತ್ಯಗಳಾಗಿದ್ದು



ಎನ್‌ಡಿಪಿಎಸ್ ಕಾಯ್ದೆ 1985 ರ ಅಡಿಯಲ್ಲಿ ಕಠಿಣ ಶಿಕ್ಷೆಗೆ ಒಳಪಡಬೇಕಾಗುತ್ತದೆ ಆದ್ದರಿಂದ ಯುವಕರು ಯಾವುದೇ ಕಾರಣಕ್ಕೂ ಮಾದಕ ವಸ್ತುಗಳ ವ್ಯಸನಕ್ಕೆ ಒಳಗಾಗಬಾರದು ಹಾಗೂ ಮಾದಕ ವಸ್ತು ವಿರೋಧಿ ಸಹಾಯವಾಣಿ 1908 ಮಾದಕ ವಸ್ತು ಸೇವನೆ ಮತ್ತು ಸಾಗಾಣಿಕೆ ಕುರಿತು ಮಾಹಿತಿ ಇದ್ದಲ್ಲಿ ತಿಳಿಸಿ ಮಾಹಿತಿ ಗೌಪ್ಯವಾಗಿ ಇಡಲಾಗುವುದು ಎಂದು ತಿಳಿಸಿದರು.

ಶ್ರೀ ಉಮೇಶ್ ಎಂ ಪಿ ಐ ವಿದ್ಯಾರ್ಥಿ ಬಳಗಕ್ಕೆ ಪ್ರತಿಜ್ಞೆ ವಿಧಿ ಬೋಧಿಸಿದರು ನಾನು ಇಂದು ಪ್ರತಿಜ್ಞೆ ಮಾಡುತ್ತೇನೆ ನಾನು ಯಾವ ಸಂದರ್ಭದಲ್ಲಿ ಮಾದಕ ವಸ್ತುಗಳನ್ನು ಬಳಸುವುದಿಲ್ಲ ನನ್ನ ಆರೋಗ್ಯ ಭವಿಷ್ಯ ಮತ್ತು ಕುಟುಂಬವನ್ನು ನಾನು ರಕ್ಷಿಸುತ್ತೇನೆ ನಾನು ಬದಲಾವಣೆಯ ದೂತನಾಗಿರುತ್ತೇನೆ ಮತ್ತು ಮಾದಕ ವಸ್ತುಗಳ ವಿರುದ್ಧವಾದ ಜೀವನವನ್ನು ಆಯ್ಕೆ ಮಾಡುತ್ತೇನೆ ನಾನು ನನ್ನ ಸ್ನೇಹಿತರಿಗೆ ತಪ್ಪು ದಾರಿಗೆ ಹೋಗದಂತೆ ಎಚ್ಚರಿಸುತ್ತೇನೆ ಮತ್ತು ಮಾದಕ ವಸ್ತುಗಳ ವಿರುದ್ಧ ಧೈರ್ಯದಿಂದ ನಿಂತು ಮಾದಕ ದ್ರವ್ಯ ಮುಕ್ತ ಸಮಾಜ ನಿರ್ಮಿಸಲು ಶ್ರಮಿಸುತ್ತೇನೆ ಜೈ ಹಿಂದ್ ಎಂದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಡಾ. ಬಲಭೀಮ ದೇಸಾಯಿ ಅವರು ಮಾತನಾಡಿ ಯಾವುದೇ ದುಶ್ಚಟಕ್ಕೆ ದಾಸರಾಗದೆ ಚೆನ್ನಾಗಿ ಓದಿ ನಿಮ್ಮ ಕನಸುಗಳನ್ನು ನನಸು ಮಾಡಿಕೊಳ್ಳಿ ಎಂದು ತಿಳಿಸಿದರು ಈ ಸಂದರ್ಭದಲ್ಲಿ ಉಪನ್ಯಾಸಕ ವೃಂದದವರು ಡಾ. ವಿದ್ಯಾಸಾಗರ ಡಾ. ಮೋನಯ್ಯ ಕಲಾಲ್ ಡಾ. ಪ್ರಮೋದ್ ಕೆ ಕುಲಕರ್ಣಿ ಡಾ. ಮಾದೇವಪ್ಪ ಶ್ರೀ ಶಾಂತಕುಮಾರ್ ಪೊಲೀಸ್ ಪೇದೆ ದಯಾನಂದ ಜಮಾದಾರ್ ಕಾರ್ಯಕ್ರಮದ ಸ್ವಾಗತ ಮತ್ತು ವಂದನಾರ್ಪಣೆಯನ್ನು ಡಾ.ಜಗದೀಶ್ ಕುಮಾರ್ ನಿರ್ವಹಿಸಿದರು ಸಹಸ್ರಾರು ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು

ಕುಡಿಯುವ ನೀರು,ಸಮರ್ಪಕ ಮೇವು ಪೂರೈಕೆಗೆ ಹಣದ ಕೊರತೆ ಇಲ್ಲ

ಎಲ್ಲ ಜಲಾಶಯಗಳು ತಳಮಟ್ಟಕ್ಕೆ ಬಂದಿವೆ. ರಾಜ್ಯದಲ್ಲಿ ಬರದ ಗಂಭೀರತೆಯನ್ನು ನೋಡಿದರೆ ಶೇ.80 ರಷ್ಟು ಕೆರೆಗಳು ಒಣಗಿ ಹೋಗಿವೆ. ಮೊದಲನೆಯದು ಕುಡಿಯುವ ನೀರಿಗೆ ತೊಂದರೆ ಆಗಬಹುದು. ಬೆಂಗಳೂರು ವಿಭಾಗದಲ್ಲಿ ಮಳೆಯ ಪ್ರಮಾಣ ನೋಡಿದಾಗ ಬೆಂಗಳೂರು ನಗರ ಜಿಲ್ಲೆ –28, ಬೆಂಗಳೂರು ಗ್ರಾಮಾಂತರ ಜಿಲ್ಲೆ –18, ರಾಮನಗರ –24, ಕೋಲಾರ –36, ಚಿಕ್ಕಬಳ್ಳಾಪುರ –28, ತುಮಕೂರು –18, ಚಿತ್ರದುರ್ಗ –28, ದಾವಣಗೆರೆ –48, ಶಿವಮೊಗ್ಗ –48 ರಷ್ಟು ಮಳೆ ಕೊರತೆಯಾಗಿದೆ. ಬೆಂಗಳೂರು ಕಂದಾಯ ವಿಭಾಗದಲ್ಲಿ ಒಟ್ಟು –37 ಮಳೆ ಕೊರತೆಯಾಗಿದೆ. ಈ ವರ್ಷ ನಮ್ಮ ರಾಜ್ಯ ಅತ್ಯಂತ ಗಂಭೀರವಾದ ಬರ ಪರಿಸ್ಥಿತಿಗೆ ತಲುಪಿದೆ ಎಂದು ವಾಸ್ತವದ ಬಗ್ಗೆ ವಿವರಿಸಿದರು.

ಈ ಸನ್ನಿವೇಶದಲ್ಲಿ ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆದು ಮತ್ತು ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡುವ ಪರಿಸ್ಥಿತಿ ಬಂದಿದೆ. ಸರ್ಕಾರ ಏನೆಲ್ಲ ಕ್ರಮ ತೆಗೆದುಕೊಳ್ಳಬೇಕು ಅದೆಲ್ಲವನ್ನೂ ಮಾಡಿದೆ. ಕುಡಿಯುವ ನೀರಿಗಾಗಿ ಪ್ರತಿ ಜಿಲ್ಲೆಗೆ 5 ಕೋಟಿ ರೂ. ಮಂಜೂರು ಮಾಡಲಾಗಿದೆ. ಈ ಹಣವನ್ನು ಈಗಾಗಲೇ ಜಿಲ್ಲಾಧಿಕಾರಿಗಳು ಖರ್ಚು ಮಾಡುತ್ತಿದ್ದಾರೆ. ಪ್ರತಿ ಕ್ಷೇತ್ರಕ್ಕೆ 1 ಕೋಟಿ ರೂ. ನೀಡುವುದಾಗಿ ಘೋಷಣೆ ಮಾಡಿದ್ದೇವೆ ಎಂದು ತಿಳಿಸಿದರು.

ರಾಜ್ಯದಲ್ಲಿ ಲಕ್ಷಾಂತರ ದನ ಕರುಗಳಿವೆ. ಮೇವಿನ ಸಂಕಷ್ಟ ಎದುರಾಗುವ ಸಾಧ್ಯತೆ ಇದೆ. ಮುಂದಿನ 30 ವಾರ, 40 ವಾರಕ್ಕೆ ಆಗುವಷ್ಟು ಮೇವು ಸಂಗ್ರಹವಿದೆ ಎಂದು ಮಾಹಿತಿ ನೀಡಿದ್ದಾರೆ. ಸಂಗ್ರಹವಿರುವ ಮೇವು ಸರಿಯಾಗಿ ಉಪಯೋಗಕ್ಕೆ ಬರಬೇಕು. ಇಲ್ಲವಾದರೆ ಕಷ್ಟಕ್ಕೆ ಸಿಲುಕುತ್ತೇವೆ. ನೀರು ಲಭ್ಯ ಇರುವ ಪ್ರದೇಶದ ರೈತರಿಗೆ ಮೇವಿನ ಬೀಜದ ಕಿಟ್ ನೀಡುವಂತೆ ಪಶುಸಂಗೋಪನಾ ಇಲಾಖೆಯವರಿಗೆ ಸೂಚನೆ ನೀಡಲಾಗಿದೆ. ಅದರ ಪ್ರಕಾರ ಬೀಜದ ಕಿಟ್ ವಿತರಿಸಲಾಗುತ್ತಿದೆ ಎಂದರು.

ಈ ಹಿಂದೆ ರಾಜ್ಯದಲ್ಲಿ ಬರದ ಪರಿಸ್ಥಿತಿ ಎದುರಾದಗ ಪಕ್ಕದ ರಾಜ್ಯದಿಂದ ಮೇವು ತರಿಸಲಾಗುತ್ತಿತ್ತು. ಮೇವು ಬ್ಯಾಂಕ್, ಗೋಶಾಲೆ ಮಾಡಲಾಗುತ್ತಿತ್ತು. ಆದರೆ ನೆರೆ ರಾಜ್ಯಗಳಲ್ಲೂ ಮಳೆ ಇಲ್ಲದೆ ಬರ ಬಿದ್ದಿದೆ. ಅಲ್ಲಿಂದಲೂ ಮೇವು ತರಿಸಲು ಸಾಧ್ಯವಾಗುತ್ತಿಲ್ಲ ಎಂದು ಮಾಹಿತಿ ನೀಡಿದರು.

ಬಾಗಲಕೋಟೆ, ವಿಜಯಪುರ, ಕೊಪ್ಪಳ, ಬಳ್ಳಾರಿ, ಯಾದಗಿರಿ ಭಾಗದ ಜಿಲ್ಲೆಗಳಲ್ಲಿ ಗುಳೆ ಹೋಗುತ್ತಿರುವ ಬಗ್ಗೆ ವರದಿ ಬರುತ್ತಿವೆ. ವಿಬಿ ಜಿ ರಾಮ್ ಜಿ ಯೋಜನೆಯಡಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು, ಜನರಿಗೆ ಉದ್ಯೋಗ ನೀಡುವಂತೆ ಸೂಚಿಸಲಾಗಿದೆ. ಸರ್ಕಾರದಲ್ಲಿ ಹಣದ ಕೊರತೆ ಇಲ್ಲ. ಯಾರು ಕೂಡ ಆತಂಕಕ್ಕೆ ಒಳಗಾಗುವುದು ಬೇಡ. ಗುಳೆ ಹೋಗುತ್ತಿರುವ ಊರುಗಳಲ್ಲಿ ಕೂಡಲೇ ಕಾಮಗಾರಿ ಕೈಗೆತ್ತಿಕೊಳ್ಳಬೇಕು ಎಂದು ನಿರ್ದೇಶನ ನೀಡಿದರು.



ಪ್ರತಿ ತಾಲ್ಲೂಕಿನಲ್ಲಿ ಟಾಸ್ಕ್ ಫೋರ್ಸ್ ರಚಿಸಲಾಗಿದೆ. ಪ್ರತಿವಾರ ಜಿಲ್ಲಾ ಮತ್ತು ತಾಲೂಕು ಮಟ್ಟದ ಟಾಸ್ಕ್‌ಫೋರ್ಸ್ ಸಭೆ ನಡೆಸುವಂತೆ ಡಿಸಿ, ಸಿಇಒಗಳಿಗೆ ಸೂಚನೆ ನೀಡಲಾಗಿದೆ. ಆಗ ಬರ ಪರಿಸ್ಥಿತಿ ಗಮನಕ್ಕೆ ಬರುತ್ತದೆ. ಬರದ ವಸ್ತುಸ್ಥಿತಿ ಏನೆಂಬುದು ಮತ್ತು ಬರ ಪರಿಸ್ಥಿತಿಯನ್ನು ಎದುರಿಸಲು ▯▯▯ಕ್ಷನ್ ಪ್ಲಾನ್ ರೂಪಿಸಲು ಅನುಕೂಲವಾಗುತ್ತದೆ. ಕುಡಿಯುವ ನೀರಿನ ಸಮಸ್ಯೆ ದಿನದಿನ ಬದಲಾಗುತ್ತಿರುತ್ತದೆ ಎಂದರು.

ಮುಂದುವರೆದು ಮಾತನಾಡಿ, ಬೆಂಗಳೂರು ಕಂದಾಯ ವಿಭಾಗದಲ್ಲಿ 13.73 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಬೇಕಿತ್ತು. ಆದರೆ, 1.74 ಲಕ್ಷ ಹೆಕ್ಟೇರ್ ಬಿತ್ತನೆಯಾಗಿದೆ. ಶೇ 13ರಷ್ಟು ಬಿತ್ತನೆಯಾಗಿದೆ. ಬರ ಪರಿಸ್ಥಿತಿಯ ಕುರಿತು ನಾನು ಮತ್ತು ಮುಖ್ಯಮಂತ್ರಿಗಳು ಪ್ರಧಾನಿಯವರಿಗೆ ಪತ್ರ ಬರೆದಿದ್ದೇವೆ. ನಾನು ಕೇಂದ್ರದ ಗೃಹ ಸಚಿವರಿಗೆ ಮತ್ತು ಕೃಷಿ ಸಚಿವರಿಗೂ ಪತ್ರ ಬರೆದು ಪ್ರಸ್ತುತ ಪರಿಸ್ಥಿತಿಯ ಬಗ್ಗೆ ವಿವರಿಸಿದ್ದೇನೆ. ಬರ ಘೋಷಣೆ ಮಾಡಲು 10 ನಿಯಮಗಳನ್ನು ರೂಪಿಸಿದ್ದಾರೆ. ಈ ನಿಯಮಗಳನ್ನು ಸಡಿಲಿಕೆ ಮಾಡುವಂತೆ ಒತ್ತಾಯಿಸಲಾಗಿದೆ. ಬರ ಪರಿಸ್ಥಿತಿಯ ಕುರಿತು ಆಗಸ್ಟ್ 15ವರೆಗೆ ಕೇಂದ್ರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಾಧ್ಯವಾಗುವುದಿಲ್ಲ. ಆಗಸ್ಟ್ ನಂತರ ಮಳೆ ಬಂದರೆ ಚಿತ್ರಣ ಬದಲಾಗಲಿದೆ. ಹೀಗಾಗಿ ಕೇಂದ್ರಕ್ಕೆ ವರದಿ ನೀಡಲು ವಿಳಂಬವಾಗಲಿದೆ ಎಂದು ತಿಳಿಸಿದರು.


ಉಪ ಮುಖ್ಯಮಂತ್ರಿಗಳು ಈ ಸಂದರ್ಭದಲ್ಲಿ ಮಾಜಿ ಸಚಿವರಾದ ಸಿ. ವೀರಣ್ಣ ಅವರ ಅಗಲಿಕೆಗೆ ಸಂತಾಪ ಸೂಚಿಸಿದರು. ಅನೇಕ ಪ್ರಗತಿಪರ ಕೆಲಸಗಳನ್ನು ಮಾಡಿ ನಮ್ಮನ್ನು ಅಗಲಿರುವ ವೀರಣ್ಣ ಅವರ ಆತ್ಮಕ್ಕೆ ಶಾಂತಿ ಕೋರಿದರು.

ಸಭೆಯಲ್ಲಿ ಸಚಿವರಾದ ರಾಮಲಿಂಗಾರೆಡ್ಡಿ, ಈಶ್ವರ ಖಂಡ್ರೆ, ರಾಜ್ಯ ಸರ್ಕಾರದ ದೆಹಲಿ ವಿಶೇಷ ಪ್ರತಿನಿಧಿಗಳಾದ ಟಿ.ಬಿ.ಜಯಚಂದ್ರ ಅವರು, ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್ ಅವರ ಮುಂತಾದವರು ಉಪಸ್ಥಿತರಿದ್ದರು.

"ನಾನು ಸರಿ, ನಾನೇ ಸರಿ" ಎಂದು ಹೇಳುವುದಕ್ಕೆ ಹೋಗಬೇಡಿ

"ನಾನು ಸರಿ ಇರಬಹುದು
ಎಂದು ಅಂದುಕೊಂಡಿದ್ದೇನೆ" ಎಂದು ಹೇಳಿ.
"ನಾನು ಸರಿ, ನಾನೇ ಸರಿ" ಎಂದರೆ
ಸಂಬಂಧಗಳು ಮತ್ತು ಸಂಘಟನೆಗಳು
ಬಿಗಡಾಯಿಸಿ ಹೋಗಬಹುದು.
"ನಾನು ಸರಿ ಇರಬಹುದು
ಎಂದು ಅಂದುಕೊಂಡಿದ್ದೇನೆ" ಎಂದು ಹೇಳಿದರೆ
"ನಾವು ಸರಿ "ಎಂದು ಮನವರಿಕೆಯಾದವರು
ಹತ್ತಿರಕ್ಕೆ, ಇನ್ನೂ ಇನ್ನೂ ಹತ್ತಿರಕ್ಕೆ ಬರುತ್ತಾರೆ.
"ನಾವು ಸರಿ ಇಲ್ಲ" ಎಂದು ಭಾವಿಸಿದವರು
ನಮ್ಮಿಂದ ದೂರ ಸರಿದುಹೋಗುತ್ತಾರೆ, ಅಷ್ಟೇ!!
ಇದರಿಂದ ಪರಸ್ಪರ ಮೈ, ಮನಸ್ಸುಗಳು
ಕುರುಕ್ಷೇತ್ರ, ಕಿಷ್ಕಿಂಧಾಕಾಂಡವಾಗುವುದು ತಪ್ಪುತ್ತದೆ.
ಕುರುಕ್ಷೇತ್ರವಾಗುವುದು ಎಂದರೆ
ಮಹಾಭಾರತವಾಗುವುದು!!
ಕಿಷ್ಕಿಂಧಾಕಾಂಡವಾಗುವುದು ಎಂದರೆ
ರಾಮಾಯಣವಾಗುವುದು!!!
ಕುರುಕ್ಷೇತ್ರದ ನಾಯಕರೂ
ಅತ್ತೂ ಕರೆದು ಮಾಡಿದ್ದಾರೆ.
ಕುರುಕ್ಷೇತ್ರದ ಖಳನಾಯಕರೂ
ಅತ್ತೂ ಕರೆದು ಮಾಡಿದ್ದಾರೆ.
ರಾಮಾಯಣದ ನಾಯಕರೂ
ಅತ್ತೂ ಕರೆದು ಮಾಡಿದ್ದಾರೆ.
ರಾಮಾಯಣದ ಖಳನಾಯಕರೂ
ಅತ್ತೂ ಕರೆದು ಮಾಡಿದ್ದಾರೆ.
"ನಾನು ಸರಿ ಇರಬಹುದು
ಎಂದು ಅಂದುಕೊಂಡಿದ್ದೇನೆ" ಎಂಬ
ಸಂಹಿತೆ, ನೀತಿಸಂಹಿತೆಯನ್ನು
ಮನೆಯಲ್ಲೂ ಜಾರಿಗೆಯಲ್ಲಿ ತನ್ನಿರಿ.
ಹಾಗೆಯೇ ಜಗತ್ತೆಂಬ
ಮಹಾಮನೆಯಲ್ಲೂ ಜಾರಿಗೆ ತನ್ನಿರಿ.
ಆಗ ನೋಡಿ, ಮನೆಯೂ ಶಾಂತವಾಗಿರುತ್ತದೆ,
ಮನಸ್ಸೂ ಶಾಂತವಾಗಿರುತ್ತದೆ!!
2. "ಇಲ್ಲಿರೋದು ಸುಮ್ಮನೆ, ಅಲ್ಲಿರೋದು ನಮ್ಮನೆ"
ಎಂದು ಹೇಳುತ್ತ ಬಹಳ ಜನಗಳು
ದಾಸರು ಹೇಳಿರುವ ಮಾತನ್ನು
ಆಗಾಗ್ಗೆ ಪುನರಾವರ್ತಿಸುತ್ತ ಇರುತ್ತಾರೆ.
ಇಲ್ಲಿ ಈ ಧರಣಿಮಂಡಲ ಮಧ್ಯದೊಳಗೆ
ಜನಗಳು ಮನೆ, ಮಠಗಳಿಗಾಗಿ
ಕಚ್ಚಾಡುವುದನ್ನು, ಕಿತ್ತಾಡುವುದನ್ನು ನೋಡಿದರೆ
ದಾಸರು ಹಾಗೆ ಹೇಳಿರುವುದು ಸುಮ್ಮನೇ ಅನ್ನಿಸುತ್ತದೆ!!

ಡಾ. ಶಿವಾನಂದ
ಶಿವಾಚಾರ್ಯ ಶ್ರೀಗಳು
ಸುಕ್ಷೇತ್ರ ಹಿರೇಮಠ,
ತಪೋವನ, ತುಮಕೂರು



ಆಗಸ್ಟ್ 16ಕ್ಕೆ ತುಮಕೂರು ಜಿಲ್ಲಾ ಬಂಜಾರ ವಾರ್ಷಿಕ ಮಹಾಸಭೆ

ತುಮಕೂರು: ತುಮಕೂರು ಜಿಲ್ಲಾ ಬಂಜಾರ (ಲಂಬಾಣಿ) ಸೇವಾಲಾಲ್ ಸೇವಾ ಸಂಘ (ರಿ.) ವತಿಯಿಂದ ಸಂಘದ 14ನೇ ವರ್ಷದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಆಗಸ್ಟ್ 16, 2026 ರ ಭಾನುವಾರ ಮಧ್ಯಾಹ್ನ 12:30 ಗಂಟೆಗೆ ತುಮಕೂರಿನ ಸರಸ್ವತಿಪುರದ ಜಿಲ್ಲಾ ಬಂಜಾರ ಭವನದಲ್ಲಿ ಆಯೋಜಿಸಲಾಗಿದೆ.ಸಂಘದ ಅಧ್ಯಕ್ಷರಾದ ಡಿ. ನಾರಾಯಣ ನಾಯಕ್ ಅವರ ಅಧ್ಯಕ್ಷತೆಯಲ್ಲಿ ನಡೆಯುವ ಈ ಸಭೆಯಲ್ಲಿ 2025–26ನೇ ಸಾಲಿನ ವಾರ್ಷಿಕ ವರದಿ, ಲೆಕ್ಕಪತ್ರ ಹಾಗೂ ಆಡಿಟ್ ವರದಿಯನ್ನು ಮಂಡಿಸಿ ಅನುಮೋದನೆ ಪಡೆಯಲಾಗುವುದು. ಹೊಸ ಸದಸ್ಯರ ನೋಂದಣಿ, ಮುಂದಿನ ವರ್ಷದ ಕಾರ್ಯಕ್ರಮಗಳ ಕುರಿತು ಚರ್ಚೆ ನಡೆಸಲಾಗುವುದು.

ಪಶುಪಾಲನ ಇಲಾಖೆ ವತಿಯಿಂದ ರೈತರಿಗೆ ಸವಲತ್ತು


ಸೂರ್ಯಪ್ರಗತಿನ್ಯೂಸ್.ಕಾಂ



ಕುಣಿಗಲ್; ಪಟ್ಟಣದ ಪಶುಪಾಲನ ಮತ್ತು ಪಶುವೈದ್ಯಕೀಯ ಇಲಾಖೆಯ ವತಿಯಿಂದ ರೈತರಿಗೆ ವಿವಿಧ ಸವಲತ್ತು ವಿತರಿಸುವ ಕಾರ್ಯಕ್ರಮಕ್ಕೆ ಶುಕ್ರವಾರ ಶಾಸಕ ಡಾ.ರಂಗನಾಥ್ ಚಾಲನೆ ನೀಡಿದರು ಕಾರ್ಯಕ್ರಮಲ್ಲಿ 14 ಮೇವು ಕತ್ತರಿಸುವ ಯಂತ್ರ 6 ಹಾಲು ಕರೆಯುವ ಯಂತ್ರ 94 ರಬ್ಬರ್ ಮ್ಯಾಟ್ ಗಳನ್ನು ರೈತರಿಗೆ ವಿತರಿಸಿ ಬಳಿಕ ಮಾತನಾಡಿದ ಶಾಸಕರು ತಾಲ್ಲೂಕಿನಲ್ಲಿ ಪ್ರಸ್ತುತ 30 ಪಶುಪಾಲನ ಆಸ್ಪತ್ರೆಗಳಿದ್ದು ವೈದ್ಯರು ಸಿಬ್ಬಂದಿಗಳು ಕೊರತೆ ಇರುವ ಕಾರಣ ಖಾಲಿ ಇರುವ ಕಡೆಗಳಲ್ಲಿ ಹೊರಗುತ್ತಿಗೆ ಆದರದಲ್ಲಿ ಸಿಬ್ಬಂದಿಗಳನ್ನು ನೇಮಿಸಿ ರೈತರಿಗೆ ಸಮಸ್ಯೆಯಾಗದಂತೆ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ,ರೈತರಿಗೆ ಹೈನುಗಾರಿಕೆಗೆ ಅವಶ್ಯಕವಾಗಿರುವ ಇನ್ನೂ ಹೆಚ್ಚಿನ ಸಲಕರಣೆ ವಿತರಿಸಲು ಪಶುಪಾಲನ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ವಹಿಸಲಾಗುವುದು,ತಾಲ್ಲೂಕಿನಲ್ಲಿ ಮಳೆ ಕೊರತೆಯ ಕಾರಣದಿಂದ ಹೈನುಗಾರಿಕೆಯ ಮೇಲೆ ಪರಿಣಾಮ ಬೀರಲಿದೆ ಹೆಚ್ಚಿನ ರೈತರು ಹೈನುಗಾರಿಕೆ ನಂಬಿಕೊಂಡಿದ್ದು ಹಾಲು ಉತ್ಪದಕರ ಸಹಕಾರ ಸಂಘಗಳಿಗೆ ಹಾಲು ಹಾಕುತ್ತಿರುವ ಉತ್ಪದಕರಿಗೆ ಇನ್ನೂ ಸಂಘಗಳಲ್ಲಿ ಸದಸ್ಯತ್ವ ನೀಡಿಲ್ಲ ಎಂಬುದು ಗಮನಕ್ಕೆ ಬಂದಿದ್ದು ಅದನ್ನು ಮುಂದಿನ ದಿನಗಳಲ್ಲಿ ಸರಿಪಡಿಸುವ ಕೆಲಸ ಮಾಡಲಾಗುವುದು ಎಂದರು ಈ ವೇಳೆ ಪಶುಪಾಲನ ಇಲಾಖೆಯ ಮುಖ್ಯ ಆಡಳಿತ ವೈದ್ಯಾಧಿಕಾರಿ ಡಾ.ಸೀತಾರಾಮಯ್ಯ, ಮುಖ್ಯ ವೈದ್ಯಾಧಿಕಾರಿ ಡಾ.ನವೀನ್ ಸೇರಿದಂತೆ ಸಿಬ್ಬಂದಿವರ್ಗ ಆಗೂ ರೈತರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು

ಮಧುಗಿರಿ ವಕೀಲರ ಸಂಘದ ಅಧ್ಯಕ್ಷರಾಗಿ ಎಂ.ಶಿವಣ್ಣ ಆಯ್ಕೆ

ಸೂರ್ಯಪ್ರಗತಿನ್ಯೂಸ್.ಕಾಂ



ಮಧುಗಿರಿ : ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷರಾಗಿ ಎಂ.ಶಿವಣ್ಣ ಶುಕ್ರವಾರ ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ.

ಉಪಾಧ್ಯಕ್ಷರಾಗಿ ಎ ಸಿ.ಆರ್. ಅಶ್ವಥ್ ನಾರಾಯಣ, ಪ್ರಧಾನ ಕಾರ್ಯದರ್ಶಿ ನರಸೇಗೌಡ , ಜಂಟಿ ಕಾರ್ಯದರ್ಶಿ ವಸಂತಕುಮಾರ್ , ಖಜಾಂಚಿ ಪುಟ್ಟಮ್ಮ , ನಿರ್ದೇಶರಾಗಿ ಚಿತ್ತಯ್ಯ , ಎಂ.ಜೆ. ಜಗದೀಶ್ , ಬಿ.ಎಲ್ . ನರಸಿಂಹಮೂರ್ತಿ , ಎನ್.ನರಸಿಂಹರಾಜು , ಮನೋಹರ , ಕೆ.ಸಂತೋಷ ಕುಮಾರ್ , ಆಯ್ಕೆಯಾದರು. ಮಂಗಳಗೌರಿ ಮತ್ತು ಸ್ವರ್ಣಾಂಭಿಕ ಅವಿರೋಧವಾಗಿ ಆಯ್ಕೆಯಾದರು. ಚುನಾವಣಾಧಿಕಾರಿಯಾಗಿ ಎಸ್.ರಘನಾಥರೆಡ್ಡಿ ಮತ್ತು ಗಂಗಾಧರಯ್ಯ ಕಾರ್ಯನಿರ್ವಹಿಸಿದರು.

ತಾಲ್ಲೂಕು ವಕೀಲರ ಸಂಘದ ನೂತನ ಅಧ್ಯಕ್ಷ ಎಂ. ಶಿವಣ್ಣ ಮಾತನಾಡಿ, ವಕೀಲರ ಸಂಘಕ್ಕೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವುದೇ ತಮ್ಮ ಮುಖ್ಯ ಗುರಿಯಾಗಿದೆ ಎಂದು ತಿಳಿಸಿದರು.

ಶಾಸಕ ಕೆ.ಎನ್. ರಾಜಣ್ಣ ಹಾಗೂ ಕೇಂದ್ರ ಸಚಿವ ವಿ. ಸೋಮಣ್ಣ ಅವರನ್ನು ಭೇಟಿ ಮಾಡಿ ಹೆಚ್ಚಿನ ಅನುದಾನ ತಂದು ವಕೀಲರ ಸಂಘದ ಕಟ್ಟಡವನ್ನು ಅಬಿವೃದ್ಧಿಪಡಿಸಲಾಗುವುದು. ಜೊತೆಗೆ ವಕೀಲರ ಸಮಸ್ಯೆಗಳಿಗೆ ಸ್ಪಂದಿಸಿ, ಮಹಿಳಾ ವಕೀಲರಿಗೂ ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲಾಗುವುದು ಎಂದು ಹೇಳಿದರು.

ವಕೀಲ ಮತದಾರರು ನಮ್ಮ ತಂಡದ ಮೇಲೆ ವಿಶ್ವಾಸವಿಟ್ಟು ಗೆಲುವು ನೀಡಿರುವುದಕ್ಕೆ ಕೃತಜ್ಞತೆ ಸಲ್ಲಿಸಿದ ಅವರು, ಎದುರಾಳಿ ತಂಡ ಎಷ್ಟೇ ಪ್ರಯತ್ನಿಸಿದರೂ ನಮ್ಮ ತಂಡವನ್ನು ಸೋಲಿಸಲು ಸಾಧ್ಯವಾಗಲಿಲ್ಲ ಎಂದು ಹರ್ಷ ವ್ಯಕ್ತಪಡಿಸಿದರು.

ವಕೀಲ ಪಾಂಡುರಂಗಪ್ಪ ಮಾತನಾಡಿ, ವಕೀಲರ ಸಮಸ್ಯೆಗಳ ಪರಿಹಾರಕ್ಕೆ ಆದ್ಯತೆ ನೀಡಿ ಉತ್ತಮ ಆಡಳಿತ ನೀಡಲಾಗುವುದು. ಸಂಘದ ನಿಯಮಾನುಸಾರ ನಿಗದಿತ ಅವಧಿಯೊಳಗೆ ಚುನಾವಣೆ ನಡೆಸುವ ಮೂಲಕ ಪಾರದರ್ಶಕ ಆಡಳಿತವನ್ನು ನೀಡುವ ಸಂಕಲ್ಪ ಹೊಂದಿದ್ದೇವೆ ಎಂದು ತಿಳಿಸಿದರು.

ಇಂದು ನಡೆದ ಚುನಾವಣೆಯಲ್ಲಿ 132 ಮತದಾರರ ಪೈಕಿ 123 ಮತದಾರರು ಹಕ್ಕು ಚಲಾಯಿಸಿ ಶೇ 93.18 ರಷ್ಟು ಮತಧಾನವಾಗಿದೆ.

'ಸಚಿವರ ರಾಜೀನಾಮೆ ಸಾಕಾಗಲ್ಲ! ಇನ್ನೂ ಎರಡು ಬೇಡಿಕೆಗಳಿವೆ

ಸೂರ್ಯಪ್ರಗತಿನ್ಯೂಸ್.ಕಾಂ



ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಿದ ಬಳಿಕವೂ ತಮ್ಮ ಹೋರಾಟ ಮುಗಿದಿಲ್ಲ ಎಂದು ಸ್ಪಷ್ಟಪಡಿಸಿರುವ ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಅಧ್ಯಕ್ಷ ಅಭಿಜಿತ್ ದೀಪ್ಕೆ, ಸರ್ಕಾರದ ಮುಂದೆ ಇನ್ನೆರಡು ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟಿದ್ದಾರೆ.

ಹೌದು.. ಧರ್ಮೇಂದ್ರ ಪ್ರಧಾನ್ ರಾಜೀನಾಮೆ ಬೆನ್ನಲ್ಲೇ ದೆಹಲಿಯ ಜಂತರ್ ಮಂತರ್‌ನಲ್ಲಿ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದ ಸಿಜೆಪಿ ಸಂಸ್ಥಾಪಕ ಅಭಿಜಿತ್ ದೀಪ್ಕೆ, ಧರ್ಮೇಂದ್ರ ಪ್ರಧಾನ್ ಅವರ ರಾಜೀನಾಮೆಯನ್ನು "ವಿದ್ಯಾರ್ಥಿ ಶಕ್ತಿಯ ಗೆಲುವು" ಎಂದು ಬಣ್ಣಿಸಿದರು.

ಶಾಂತಿಯುತ ಸಾರ್ವಜನಿಕ ಒತ್ತಡದ ಮೂಲಕ ಸರ್ಕಾರವನ್ನು ಹೊಣೆಗಾರಿಕೆಗೆ ಒಳಪಡಿಸಬಹುದು ಎಂಬುದನ್ನು ಈ ಚಳವಳಿ ಸಾಬೀತುಪಡಿಸಿದೆ ಎಂದು ಅವರು ಹೇಳಿದರು.

ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಿದ ಬೆನ್ನಲ್ಲೇ, ಅದರ ಸಂಪೂರ್ಣ ಶ್ರೇಯಸ್ಸನ್ನು ಕಾಕ್ರೋಚ್ ಜನತಾ ಪಾರ್ಟಿ (ಸಿಜೆಪಿ) ಸಂಸ್ಥಾಪಕ ಅಭಿಜಿತ್ ದೀಪ್ಕೆ ತಮ್ಮ ಪಕ್ಷದ ಹೋರಾಟಕ್ಕೆ ನೀಡಿದ್ದಾರೆ.

ಇನ್ನೂ 2 ಬೇಡಿಕೆಗಳಿವೆ, ಸರ್ಕಾರಕ್ಕೆ ಹೊಸ ಗಡುವು

ಇದೇ ವೇಳೆ ನಮಗೆ ಇನ್ನೂ ಎರಡು ಬೇಡಿಕೆಗಳಿವೆ ಎಂದು ಹೇಳುವ ಮೂಲಕ ಹೊಸ ಬಾಂಬ್ ಸ್ಫೋಟಿಸಿರುವ ದೀಪ್ಕೆ ಈ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರಕ್ಕೆ ಗಡುವು ಕೂಡ ನೀಡಿದ್ದಾರೆ.

'ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಿರುವುದು ಸ್ವಾಗತಾರ್ಹ ಬೆಳವಣಿಗೆಯಾದರೂ, ಅದು ಮಾತ್ರ ಸಾಕಾಗುವುದಿಲ್ಲ ಎಂದು ಅವರು ಒತ್ತಿ ಹೇಳಿದ್ದಾರೆ. "ಧರ್ಮೇಂದ್ರ ಪ್ರಧಾನ್ ರಾಜೀನಾಮೆ ನೀಡಿದ್ದಾರೆ. ಆದರೆ ಆತ್ಮಹತ್ಯೆ ಮಾಡಿಕೊಂಡ ವಿದ್ಯಾರ್ಥಿಗಳ ಕುಟುಂಬಗಳಿಗೆ □1 ಕೋಟಿ ಪರಿಹಾರ ಸಿಗಬಾರದೇ? ಖಂಡಿತ ಸಿಗಬೇಕು. ಅಂತಹ ಪ್ರತಿಯೊಂದು ಕುಟುಂಬಕ್ಕೂ □1 ಕೋಟಿ ಪರಿಹಾರ ನೀಡಬೇಕು. ಜೊತೆಗೆ ಜುಲೈ 20ರಂದು ವಿದ್ಯಾರ್ಥಿಗಳ ಮೇಲೆ ಗೂಂಡಾಗಳಂತೆ ವರ್ತಿಸಿದ ಪೊಲೀಸ್ ಸಿಬ್ಬಂದಿ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು," ಎಂದು ಆಗ್ರಹಿಸಿದರು.

ದೇಶಾದ್ಯಂತ ವಿಸ್ತರಿಸಿದ್ದ ಪ್ರತಿಭಟನೆ

ಅಂದಹಾಗೆ "ಕಾಕ್ರೋಚ್‌ಗಳು" ಎಂದು ಜನಪ್ರಿಯವಾಗಿರುವ ಪ್ರತಿಭಟನಾಕಾರರ ಶಾಂತಿಯುತ ಚಳವಳಿ ಒಂದು ತಿಂಗಳಿಗೂ ಹೆಚ್ಚು ಹಿಂದೆ ಶಿಕ್ಷಣ ಸುಧಾರಣೆಯ ಬೇಡಿಕೆಯೊಂದಿಗೆ ಆರಂಭವಾಗಿತ್ತು. ಬಳಿಕ ಅದು ನಿರುದ್ಯೋಗ, ಸರ್ಕಾರದ ಉತ್ತರದಾಯಿತ್ವ ಮತ್ತು ಆರ್ಥಿಕ ಅವಕಾಶಗಳ ಕುರಿತು ವ್ಯಾಪಕ ಪ್ರತಿಭಟನೆಯಾಗಿ ವಿಸ್ತರಿಸಿತು.

ಆದರೆ ಜುಲೈ 20ರಂದು ಪ್ರತಿಭಟನೆ ತೀವ್ರ ಸ್ವರೂಪ ಪಡೆದುಕೊಂಡಿತ್ತು. ಸಂಸತ್ ಭವನದತ್ತ ಮೆರವಣಿಗೆ ನಡೆಸುತ್ತಿದ್ದ ಸಾವಿರಾರು ಪ್ರತಿಭಟನಾಕಾರರನ್ನು ಚದುರಿಸಲು ಪೊಲೀಸರು ಮುಂದಾದಾಗ ಪರಿಸ್ಥಿತಿ ಉದ್ವಿಗ್ನಗೊಂಡಿತ್ತು. ಈ ವೇಳೆ ಹಲವಾರು ವಿದ್ಯಾರ್ಥಿಗಳು ಗಾಯಗೊಂಡಿದ್ದು, ಪ್ರತಿಭಟನಾಕಾರರ ಆಕ್ರೋಶ ಮತ್ತಷ್ಟು ಹೆಚ್ಚಿಸಿತ್ತು.

"ನಾನು ಸಚಿವ ಸ್ಥಾನದ ಆಕಾಂಕ್ಷಿ" ;ಆನೇಕಲ್ ಶಾಸಕ ಬಿ. ಶಿವಣ್ಣ ಹೇಳಿಕೆ

ಸೂರ್ಯಪ್ರಗತಿನ್ಯೂಸ್.ಕಾಂ



ಆನೇಕಲ್: ತಾಲೂಕಿನ ಬೊಮ್ಮಸಂದ್ರ ಪುರಸಭೆ ವ್ಯಾಪ್ತಿಯ ಕಿತ್ತಗಾನಹಳ್ಳಿ ಗ್ರಾಮದ ಕರೆ ಪ್ರವೇಶ ದ್ವಾರದಿಂದ ಅರಳಿ ಮರದವರೆಗೆ ಸುಮಾರು □1.20 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಳ್ಳಲಿರುವ ಸಿಸಿ ರಸ್ತೆ ಕಾಮಗಾರಿಗೆ ಆನೇಕಲ್ ಕ್ಷೇತ್ರದ ಶಾಸಕ ಬಿ. ಶಿವಣ್ಣ ಅವರು ಗುದ್ದಲಿ ಪೂಜೆ ನೆರವೇರಿಸಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ರಾಜ್ಯಸಭಾ ಸದಸ್ಯ ಲೆಹರ್ ಸಿಂಗ್ ಅವರ ಅನುದಾನದಡಿ ರಸ್ತೆ ನಿರ್ಮಾಣವಾಗುತ್ತಿದ್ದು, ಸಾರ್ವಜನಿಕರ ಸುಗಮ ಸಂಚಾರಕ್ಕೆ ಇದು ಅನುಕೂಲವಾಗಲಿದೆ ಎಂದರು. ಕಾಮಗಾರಿಯನ್ನು ಗುಣಮಟ್ಟದಿಂದ ಹಾಗೂ ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಿದರು.

ಈ ವೇಳೆ ಸಚಿವ ಸ್ಥಾನದ ಕುರಿತು ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಿದ ಶಾಸಕ ಬಿ. ಶಿವಣ್ಣ, "ನಾನು ಸಹ ಸಚಿವ ಸ್ಥಾನದ ಆಕಾಂಕ್ಷಿ. 40 ವರ್ಷಗಳಿಂದ ಕಾಂಗ್ರೆಸ್ ಪಕ್ಷಕ್ಕೆ ದುಡಿದಿದ್ದೇನೆ. ಪಕ್ಷ ಐದು ಬಾರಿ ಟಿಕೆಟ್ ನೀಡಿದ್ದು, ಮೂರು ಬಾರಿ ಗೆದ್ದು ಎರಡು ಬಾರಿ ಸೋತಿದ್ದೇನೆ. ಸಚಿವ ಸ್ಥಾನದ ಬಗ್ಗೆ ಅಂತಿಮ ತೀರ್ಮಾನವನ್ನು ಪಕ್ಷದ ಹೈಕಮಾಂಡ್‌ಗೆ ಬಿಟ್ಟಿದ್ದೇವೆ. ಇನ್ನೊಂದು ವಾರದೊಳಗೆ ನಿರ್ಧಾರವಾಗುವ ನಿರೀಕ್ಷೆಯಿದೆ" ಎಂದು ಹೇಳಿದರು.

ಇದೇ ವೇಳೆ, "ಆನೇಕಲ್ ಕ್ಷೇತ್ರದ ಜನರು ನನ್ನ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ಎಂದಿಗೂ ಧಕ್ಕೆ ಬಾರದಂತೆ ಕೆಲಸ ಮಾಡುತ್ತೇನೆ. ಕ್ಷೇತ್ರದ ಅಭಿವೃದ್ಧಿಗೆ ಸದಾ ಬದ್ಧನಾಗಿರುತ್ತೇನೆ" ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಬೊಮ್ಮಸಂದ್ರ ಕೈಗಾರಿಕಾ ಸಂಘದ ಅಧ್ಯಕ್ಷ ಎ. ಪ್ರಸಾದ್, ಮಾಜಿ ಅಧ್ಯಕ್ಷ ಎ. ಗೋಪಾಲ್, ಮುಖ್ಯಾಧಿಕಾರಿ ವೆಂಕಟೇಶ್, ಹೆಬ್ಬಗೋಡಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೊಮ್ಮಸಂದ್ರ ಲಿಂಗಣ್ಣ, ಕಿತ್ತಗಾನಹಳ್ಳಿ ಶಿವಪ್ಪರೆಡ್ಡಿ, ಕೃಷ್ಣಾರೆಡ್ಡಿ, ದೀಪಕ್, ಭದ್ರಾರೆಡ್ಡಿ, ಸಂಜು ಸಾವಂತ್, ಬನಹಳ್ಳಿ ಅಭಿಷೇಕ್, ಆನಂದ್ ಕುಮಾರ್, ಪಾರೂಕ್ ಸೇರಿದಂತೆ ಸ್ಥಳೀಯ ಮುಖಂಡರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

ಸಾರ್ವಜನಿಕರು ಯಾವುದೇ ಗೊಂದಲಗಳಿದ್ದರೂ ಅಧಿಕಾರಿಗಳನ್ನು ಸಂಪರ್ಕಿಸಬೇಕು

ಸೂರ್ಯಪ್ರಗತಿನ್ಯೂಸ್.ಕಾಂ



ಆನೇಕಲ್: ತಾಲ್ಲೂಕಿನಲ್ಲಿ ಎಸ್‌ಐಆರ್ ಪ್ರಕ್ರಿಯೆ ಭಾಗವಾಗಿ ಶೇ.62.84ರಷ್ಟು ನಮೂನೆಗಳು ಡಿಜಿಟಲೀಕರಣವಾಗಿದ್ದು ಎರಡು ಮೂರು ದಿನಗಳಲ್ಲಿ ಶೇ.100ರಷ್ಟು ಗುರಿ ಸಾಧನೆ ಮಾಡಲು ಎಲ್ಲಾ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ತಹಶೀಲ್ದಾರ್ ಶಶಿಧರ್ ಮಾಡ್ಯಾಳ್ ತಿಳಿಸಿದರು.

ಆನೇಕಲ್ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 381 ಮತಗಟ್ಟೆಗಳಿದ್ದು ಒಟ್ಟು 4,25,624 ಮತದಾರರಿದ್ದಾರೆ ಈ ಪೈಕಿ ಬೇರೆಡೆಗೆ ಹೋಗಿರುವವರು, ಮೃತಪಟ್ಟಿರುವವರು ಸೇರಿದಂತೆ ವಿವಿಧ ಕಾರಣಗಳಿಂದಾಗಿ 1,18,360 ಮಂದಿಯ ದಾಖಲೆಗಳನ್ನು ಗುರುತಿಸಲಾಗಿದೆ. 3,07,264 ಮತದಾರರ ಪೈಕಿ 1,93,074 ಮತದಾರರ ಗಣತಿ ನಮೂನೆಗಳನ್ನು ಡಿಜಿಲಟೀಕರಣಗೊಳಿಸಲಾಗಿದೆ. ಬಿಎಲ್‌ಓಗಳು ಕಡ್ಡಾಯವಾಗಿ ಮನೆ ಮನೆಗೆ ಭೇಟಿ ನೀಡಿ ಮತದಾರರಿಂದ ಮಾಹಿತಿ ಪಡೆಯಬೇಕು. ಸಾರ್ವಜನಿಕರು ತಮಗೆ ಯಾವುದೇ ಗೊಂದಲಗಳಿದ್ದರೂ ಅಧಿಕಾರಿಗಳನ್ನು ಸಂಪರ್ಕಿಸಬೇಕು. ಅರ್ಹ ಮತದಾರರು ಮತದಾರರ ಪಟ್ಟಿಯಲ್ಲಿರಬೇಕು ಎಂಬ ಉದ್ದೇಶದಿಂದ ಎಸ್‌ಐಆರ್ ನಡೆಸಲಾಗುತ್ತಿದೆ. ಸಾರ್ವನಿಕರು ಈ ಬಗ್ಗೆ ಜಾಗೃತಿ ಮೂಡಿಸಬೇಕು ಎಂದರು.

ಶಾಸಕ ಬಿ.ಶಿವಣ್ಣ ಶುಕ್ರವಾರ ಎಸ್‌ಐಆರ್ ನಮೂನೆಯನ್ನು ತುಂಬಿ ಬಿಎಲ್‌ಓ ಅಧಿಕಾರಿಗಳಿಗೆ ನೀಡಿ ಮಾತನಾಡಿ ಪ್ರತಿ ಗ್ರಾಮಗಳಲ್ಲಿಯೂ ಯುವಕರು ಮತ್ತು ವಿದ್ಯಾರ್ಥಿಗಳು ಎಸ್‌ಐಆರ್ ಬಗ್ಗೆ ಆಸಕ್ತಿ ವಹಿಸಬೇಕು. ವಿದ್ಯಾರ್ಥಿಗಳು ತಮ್ಮ ಪೋಷಕರ ಹೆಸರು ಮತದಾರರ ಪಟ್ಟಿಯಲ್ಲಿ ನೊಂದಣಿ ಮಾಡಿರುವ ಬಗ್ಗೆ ಖಚಿತ ಪಡಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಎಲ್ಲಾ ಅಧಿಕಾರಿಗಳಿಗೂ ಪಾರದರ್ಶಕವಾಗಿ

ಎಸ್‌ಐಆರ್ ಕಾರ್ಯ ನಡೆಸುವಂತೆ ಸೂಚನೆ ನೀಡಲಾಗಿದೆ. ಪುರಸಭೆ, ನಗರಸಭೆ, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಎಸ್‌ಐಆರ್ ಅರ್ಜಿಗಳನ್ನು ತುಂಬಿಸಿ ಪಡೆಯುವ ಸಂಬಂಧ ಮತ್ತು ಸರಿಯಾಗಿ ನಮೂನೆಗಳನ್ನು ಭರ್ತಿ ಮಾಡಲು ಬಿಎಲ್‌ಓಗಳಿಗೆ ಸೂಚಿಸಲಾಗಿದೆ. ಅವಶ್ಯಕತೆಯಿರುವೆಡೆ ಬಿಎಲ್‌ಎಗಳ ಸಹಕಾರ ಪಡೆದು ಪ್ರತಿಯೊಬ್ಬ ಅರ್ಹ ಮತದಾರರು ಮತದಾರರ ಪಟ್ಟಿಯಲ್ಲಿರುವಂತೆ ನೋಡಿಕೊಳ್ಳಬೇಕು ಎಂದರು.

ಎಸ್ ಐಆರ್ ಪ್ರಕ್ರಿಯೆ: 7,49,582 ಗಣತಿ ನಮೂನೆಗಳ ಗಣಕೀಕರಣ



ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ–2026ರ (ಎಸ್ ಐಆರ್) ಪ್ರಕ್ರಿಯೆ ಬಿರುಸಿನಿಂದ ಸಾಗುತ್ತಿದ್ದು, ಜಿಲ್ಲೆಯಾದ್ಯಂತ ಒಟ್ಟು 15,721 ಮೃತರ ಹೆಸರು ಮತದಾರರ ಪಟ್ಟಿಯಲ್ಲಿ ಪತ್ತೆಯಾಗಿದೆ ಎಂದು ಜಿಲ್ಲಾಧಿಕಾರಿ ಡಾ. ಕೆ.ಎನ್. ಅನುರಾಧ ಅವರು ಮಾಹಿತಿ ನೀಡಿದರು.

ಜಿಲ್ಲಾಡಳಿತ ಭವನದ ನ್ಯಾಯಾಲಯ ಸಭಾಂಗಣದಲ್ಲಿ ಭಾರತ ಚುನಾವಣಾ ಆಯೋಗದ ವತಿಯಿಂದ ಶುಕ್ರವಾರ ಹಮ್ಮಿಕೊಳ್ಳಲಾದ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ–2026ರ (ಎಸ್ ಐಆರ್) ಪ್ರಕ್ರಿಯೆ ಪ್ರಗತಿ ಕುರಿತು ಮಾತನಾಡಿದರು.

ಬಿಎಂಗಳು ಮನೆ ಮನೆ ಭೇಟಿ ನೀಡಿದ ಸಂದರ್ಭದಲ್ಲಿ ಜುಲೈ 24 ರ ವರೆಗೆ ಜಿಲ್ಲೆಯಾದ್ಯಂತ ಒಟ್ಟು 35,198 ಮತದಾರರನ್ನು ಸ್ಥಳಾಂತರ, ವಲಸೆ, ಮರಣ, ದ್ವಿಪತಿ (ಡೂಪ್ಲಿಕೇಟ್) ಸೇರಿದಂತೆ ಇತರೆ ಕಾರಣಗಳಿಗಾಗಿ ಗುರುತಿಸಲಾಗಿದೆ. ಒಟ್ಟಾರೆಯಾಗಿ ಜಿಲ್ಲೆಯಲ್ಲಿ 1150 ಮತದಾರರು ಗೈರು ಹಾಜರಾಗಿದ್ದಾರೆ. ಉಳಿದಿದ್ದು, 12,165 ಶಾಶ್ವತ ವಲಸೆ, 15,721 ಮೃತ, 5,721 ದ್ವಿಪ್ರತಿ ನಮೂನೆಗಳು ಹಾಗೂ 441 ಇತರೆ ಪ್ರಕರಣಗಳನ್ನು ಪತ್ತೆ ಹಚ್ಚಲಾಗಿದೆ.

ಕ್ಷೇತ್ರವಾರು ವಿವರ:

ದೊಡ್ಡಬಳ್ಳಾಪುರ ಕ್ಷೇತ್ರದಲ್ಲಿ ಒಟ್ಟು 7,143 ಪ್ರಕರಣಗಳನ್ನು ಗುರುತಿಸಲಾಗಿದ್ದು, ಇದರಲ್ಲಿ 400 ಸಂಗ್ರಹವಾಗದ, 1321 ಶಾಶ್ವತ ವಲಸೆ, 3390 ಮರಣ, 1830 ದ್ವಿಪ್ರತಿ ಹಾಗೂ 202 ಇತರೆ ಪ್ರಕರಣಗಳಿವೆ.

ನೆಲಮಂಗಲ ಕ್ಷೇತ್ರದಲ್ಲಿ ಒಟ್ಟು 10,640 ಪ್ರಕರಣಗಳು ಪತ್ತೆಯಾಗಿದ್ದು, 257 ಸಂಗ್ರಹವಾಗದ, 4609 ಶಾಶ್ವತ ವಲಸೆ, 4468 ಮರಣ, 1264 ದ್ವಿಪ್ರತಿ ಮತ್ತು 42 ಇತರೆ ಪ್ರಕರಣಗಳಿವೆ.

ಹೊಸಕೋಟೆ ಕ್ಷೇತ್ರದಲ್ಲಿ ಒಟ್ಟು 9204 ಪ್ರಕರಣಗಳಿದ್ದು, 211 ಸಂಗ್ರಹವಾಗದ, 2785 ಶಾಶ್ವತ ವಲಸೆ, 4663 ಮರಣ, 1369 ದ್ವಿಪ್ರತಿ ಹಾಗೂ 176 ಇತರೆ ಪ್ರಕರಣಗಳಿವೆ.

ದೇವನಹಳ್ಳಿ ಕ್ಷೇತ್ರದಲ್ಲಿ ಒಟ್ಟು 8,211 ಪ್ರಕರಣಗಳಿದ್ದು, 282 ಸಂಗ್ರಹವಾಗದ, 3450 ಶಾಶ್ವತ ವಲಸೆ, 3200 ಮರಣ, 1258 ದ್ವಿಪ್ರತಿ ಹಾಗೂ 21 ಇತರೆ ಪ್ರಕರಣಗಳು ಒಳಗೊಂಡಿವೆ.

ವಿಧಾನಸಭಾವಾರು ಎನುಮೆರೇಷನ್ ನಮೂನೆ ವಿತರಣೆ ಮತ್ತು ಗಣಕೀಕರಣ ಪ್ರಗತಿ:

ಜಿಲ್ಲೆಯ ಒಟ್ಟು 9,12,913 ಮತದಾರರ ಪೈಕಿ ಇಂದಿನವರೆಗೆ ಬಿಎ□□□ಗಳು ಒಟ್ಟು 9,12,913 ಎನುಮೆರೇಷನ್ ನಮೂನೆಗಳನ್ನು ವಿತರಿಸಿದ್ದು, ಈ ಪೈಕಿ 7,49,582 ನಮೂನೆಗಳನ್ನು ಗಣಕೀಕರಿಸಲಾಗಿದೆ.

ಜಿಲ್ಲೆಯ 04 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮತಗಟ್ಟೆಗಳ ಬೂತ್ ಮಟ್ಟದ ಅಧಿಕಾರಿಗಳು (ಬಿಎ0 ಜೂನ್ 30 ರಿಂದಲೇ ಎನುಮೆರೇಷನ್ ಫಾರಂ ಗಳೊಂದಿಗೆ (ಇಟಿಣಟಜಡಿಚಿಣುಠಿಟ ಈಠಡಿಛ) ಮತದಾರರ ಮನೆ ಮನೆಗೆ ಭೇಟಿ ನೀಡಲು ಪ್ರಾರಂಭಿಸಿದ್ದಾರೆ. ಈ ಮಾಹಿತಿ ಸಂಗ್ರಹ ಹಾಗೂ ಸಂಗ್ರಹಿಸಿದ ನಮೂನೆಗಳ ಗಣಕೀಕರಣ ಪ್ರಕ್ರಿಯೆಯು ಜೂನ್ 30 ರಿಂದ ಆಗಸ್ಟ್ 08 ರವರೆಗೆ ನಡೆಯಲಿದೆ.

ಜಿಲ್ಲೆಯಲ್ಲಿ ಜೂನ್ 16 ರವರೆಗೆ ಒಟ್ಟು 9,12,913 ಮತದಾರರಿದ್ದು, ಬಿಎ ಗಳಿಗೆ ಅಗತ್ಯವಿರುವ ಎಲ್ಲಾ ಫಾರಂಗಳನ್ನು ಮುದ್ರಿಸಿ ವಿತರಿಸಲಾಗಿದೆ.

ಕ್ಷೇತ್ರವಾರು ವಿವರ:

180–ದೊಡ್ಡಬಳ್ಳಾಪುರ: ಒಟ್ಟು 2,23,400 ಮತದಾರರಿದ್ದು, ಬಿಎ0ಗಳಿಂದ ಎಲ್ಲಾ 2,23,400 ನಮೂನೆಗಳನ್ನು ವಿತರಿಸಲಾಗಿದ್ದು, 1,77,220 ನಮೂನೆಗಳನ್ನು ಗಣಕೀಕರಿಸಲಾಗಿದೆ.

181–ನೆಲಮಂಗಲ: ಒಟ್ಟು 2,24,104 ಮತದಾರರಿದ್ದು, ಎಲ್ಲಾ 2,24,104 ನಮೂನೆಗಳನ್ನು ವಿತರಿಸಲಾಗಿದ್ದು, 1,80,105 ನಮೂನೆಗಳನ್ನು ಗಣಕೀಕರಿಸಲಾಗಿದೆ.

178–ಹೊಸಕೋಟೆ: ಒಟ್ಟು 2,46,155 ಮತದಾರರಿದ್ದು, ಎಲ್ಲಾ 2,46,155 ನಮೂನೆಗಳನ್ನು ವಿತರಿಸಲಾಗಿದ್ದು, 2,06,208 ನಮೂನೆಗಳನ್ನು ಗಣಕೀಕರಿಸಲಾಗಿದೆ.

179–ದೇವನಹಳ್ಳಿ: ಒಟ್ಟು 2,19,254 ಮತದಾರರಿದ್ದು, ಎಲ್ಲಾ 2,19,254 ನಮೂನೆಗಳನ್ನು ವಿತರಿಸಲಾಗಿದ್ದು, 1,86,049 ನಮೂನೆಗಳನ್ನು ಗಣಕೀಕರಿಸಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ವಾಸಂತಿ ಅಮರ್, ಪೊಲೀಸ್ ವರಿಷ್ಠಾಧಿಕಾರಿ ಎಂ.ವಿ ಚಂದ್ರಕಾಂತ, ಅಪರ ಜಿಲ್ಲಾಧಿಕಾರಿ ಸೈಯಿದಾ ಆಯಿಷಾ ಹಾಗೂ ದೊಡ್ಡಬಳ್ಳಾಪುರ ಉಪವಿಭಾಗಾಧಿಕಾರಿ ಮಂಜುನಾಥ್ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು

ವ್ಯಸನ ಮುಕ್ತ ದಿನಾಚರಣೆಗೆ ಅಗತ್ಯ ಸಿದ್ಧತೆ ಕೈಗೊಳ್ಳಲು ಡಿಸಿ ಸೂಚನೆ

ಸೂರ್ಯಪ್ರಗತಿನ್ಯೂಸ್.ಕಾಂ



ಬೆಂ.ಗ್ರಾ ಜಿಲ್ಲೆ ಜು.ಡಾ.ಮಹಾಂತ ಶಿವಯೋಗಿಗಳ ಜನ್ಮ ದಿನಾಚರಣೆ ಅಂಗವಾಗಿ ಪ್ರತಿ ವರ್ಷ ಆಗಸ್ಟ್ 1ರಂದು ಆಚರಿಸುವ ವ್ಯಸನ ಮುಕ್ತ ದಿನಾಚರಣೆಯನ್ನು ಜಿಲ್ಲಾ ಹಾಗೂ ತಾಲೂಕುಗಳಲ್ಲಿ ಅರ್ಥಪೂರ್ಣವಾಗಿ ಆಚರಿಸಲು ಅಗತ್ಯ ಸಿದ್ಧತೆ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಡಾ.ಕೆ.ಎನ್ ಅನುರಾಧ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಡಳಿತ ಭವನದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಡಾ.ಮಹಾಂತ ಶಿವಯೋಗಿಗಳ ಜನ್ಮ ದಿನಾಚರಣೆ ಹಿನ್ನೆಲೆ ವ್ಯಸನಮುಕ್ತ ದಿನಾಚರಣೆಯ ಕುರಿತು ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮಹಾಂತ ಶಿವಯೋಗಿಗಳ ಜನ್ಮದಿನವನ್ನು ರಾಜ್ಯ ಸರ್ಕಾರವು ಪ್ರತಿ ವರ್ಷ ಆಗಸ್ಟ್ 1ರಂದು ವ್ಯಸನ ಮುಕ್ತ ದಿನವನ್ನಾಗಿ ಆಚರಣೆ ಮಾಡುತ್ತಿದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಡಳಿತ ಸಹಯೋಗದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಯೋಗದಲ್ಲಿ ಆಚರಣೆ ಮಾಡಬೇಕು. ತಾಲ್ಲೂಕು ಮಟ್ಟದಲ್ಲಿ ತಹಶೀಲ್ದಾರ್ ನೇತೃತ್ವದಲ್ಲಿ ಕಾರ್ಯಕ್ರಮ ಆಯೋಜಿಸಬೇಕು ಎಂದರು.

ಕಾರ್ಯಕ್ರಮಕ್ಕೆ ವೇದಿಕೆ ಸಿದ್ಧತೆ, ಉಪನ್ಯಾಸ, ಕುಡಿಯುವ ನೀರು, ಉಪಹಾರ, ಕಾಲೇಜು ಮತ್ತು ಹಾಸ್ಟೆಲ್ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲು ಕ್ರಮ ವಹಿಸಿ ಎಂದರು.

ಸಭೆಯಲ್ಲಿ ಎಸ್ಪಿ ಚಂದ್ರಕಾಂತ್ ಎಂ.ವಿ, ಅಪರ ಜಿಲ್ಲಾಧಿಕಾರಿ ಸೈಯಿದಾ ಆಯಿಷಾ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಉಪನಿರ್ದೇಶಕ ಅಶೋಕ್ ಕುಮಾರ್ ಡಿ, ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮೋಹನ್ , ಜಿಲ್ಲಾ ಮಟ್ಟದ ಅಧಿಕಾರಿಗಳು

ನಿಸ್ವಾರ್ಥ ಭಾವನೆಯಿಂದ ಮಾಡುವ ಸಮಾಜ ಸೇವೆ ಸಮಾಜಕ್ಕೆ ಯಾವಾಗಲೂ ಆದರ್ಶಪ್ರಾಯ; ರಾ.ಪ.ರವಿಶಂಕರ್

ಸೂರ್ಯಪ್ರಗತಿನ್ಯೂಸ್.ಕಾಂ



ರಾಮನಗರ: ನಿಸ್ವಾರ್ಥ ಭಾವನೆಯಿಂದ ಮಾಡುವ ಸಮಾಜ ಸೇವೆ ಸಮಾಜಕ್ಕೆ ಯಾವಾಗಲೂ ಆದರ್ಶಪ್ರಾಯವಾಗಿದ್ದು ಡಾ.ಕೆ.ಆರ್.ಪ್ರದೀಪ್ ದಂಪತಿಗಳು ಆಕಾಶದಲ್ಲಿನ ಎರಡು ಧ್ರುವ ನಕ್ಷತ್ರಗಳಿದ್ದಂತೆ ಎಂದು ಕರ್ನಾಟಕ ಆರ್ಯವೈಶ್ಯ ಮಹಾಸಭಾದ ಅಧ್ಯಕ್ಷ ರಾ.ಪ.ರವಿಶಂಕರ್ ತಿಳಿಸಿದರು.

ನಗರದ ಎಂ.ಜಿ.ರಸ್ತೆಯಲ್ಲಿನ ಶ್ರೀ ಕನ್ನಿಕಾಮಹಲ್ ನಲ್ಲಿ ಸಾಧಕ ದಂಪತಿಗಳಾದ ಡಾ.ಕೆ.ಆರ್.ಪ್ರದೀಪ್ ಹಾಗೂ ಅನುರಾಧ ಪ್ರದೀಪ್ ಅವರಿಗೆ ಆರ್ಯವೈಶ್ಯ ಸಭಾ, ವಾಸವಿ ವಿದ್ಯಾನಿಕೇತನ ಟ್ರಸ್ಟ್, ವಾಸವಿ ವನಿತಾ ಸಂಘ, ವಾಸವಿ ಯೂತ್ಸ್ ಫೋರಂ, ವಾಸವಿ ಇಂಟರ್ ನ್ಯಾಷನಲ್ ಕ್ಲಬ್ ಮತ್ತು ವಾಸವಿ ಭಜನಾ ಮಂಡಳಿ ಸಹಯೋಗದೊಂದಿಗೆ ಏರ್ಪಡಿಸಿದ್ದ ಅಭಿನಂದನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಯಾವುದೇ ಪ್ರಚಾರವಿಲ್ಲದ ಸಾಧಕರನ್ನು ಗುರುತಿಸಿ ಅವರ ಊರಿನಲ್ಲಿಯೇ ಗೌರವಿಸುವ ಕಾರ್ಯ ನಿಜಕ್ಕೂ ಅರ್ಥಪೂರ್ಣವಾಗಿದೆ. ಪ್ರದೀಪ್ ಮತ್ತು ಅನುರಾಧ ಈ ಇಬ್ಬರೂ ದಂಪತಿಗಳ ಸಾಧನೆ ಎಲ್ಲರಿಗೂ ಪ್ರೇರಣೆಯಾಗಿದೆ. ಆಕಾಶದಲ್ಲಿನ ಧ್ರುವ ನಕ್ಷತ್ರದಂತೆ ಈ ದಂಪತಿಗಳು ವೇದಿಕೆಯಲ್ಲಿ ಕಂಗೊಳಿಸುತ್ತಿದ್ದಾರೆ. ಬದುಕಿಗೆ ಒಂದು ಗುರಿ ಇರಬೇಕು, ಬದುಕುವುದೇ ಗುರಿಯಾಗಬಾರದು ಎಂದು ಅಭಿಪ್ರಾಯಪಟ್ಟರು.


ಪ್ರದೀಪ್ ಅವರು ಅರಳಿಮರದ ರೀತಿ ಬೆಳೆದಿದ್ದಾರೆ, ಹತ್ತಾರು ಸಂಸ್ಥೆಗಳನ್ನು ಹುಟ್ಟುಹಾಕಿದ್ದಾರೆ. ಆದರ್ಶವಾಗಿ ನಡೆದು ನಮಗೆಲ್ಲರಿಗೂ ಆದರ್ಶಪ್ರಾಯರಾಗಿದ್ದಾರೆ. ಇತಿಹಾಸ ಮರೆತರೆ ಭವಿಷ್ಯ ಬರೆಯಲು ಸಾಧ್ಯವಿಲ್ಲ, ಸಾಕಷ್ಟು ಜನ ಪುಸ್ತಕ ಬರೆಸಿಕೊಳ್ಳುತ್ತಾರೆ, ಆದರೆ ಪ್ರದೀಪ್ ಅವರ ಸಾಧನೆಗಳೇ ಪುಸ್ತಕ ಬರೆಯಲು ಪ್ರೇರಣೆಯಾಗಿದೆ. ಹಲವಾರು ಮಂದಿ ಹಣ ಮಾಡಿರುವವರು ತಮ್ಮ ಕುಟುಂಬಕ್ಕೆ, ತಮ್ಮ ವಂಶವನ್ನಷ್ಟೇ ನೋಡುತ್ತಾರೆ, ಆದರೆ ಸಮಾಜವನ್ನು ನೋಡುವವರ ಸಂಖ್ಯೆ ವಿರಳ, ಅವರ ಸಾಲಿಗೆ ಪ್ರದೀಪ್ ಸೇರುತ್ತಾರೆ ಎಂದರು.

ಪೌರ ಸನ್ಮಾನ : ಮುಖ್ಯ ಅತಿಥಿಯಾಗಿ ಭಾಗವಹಿದ್ದ ನಗರಸಭಾಧ್ಯಕ್ಷ ಕೆ. ಶೇಷಾದ್ರಿ ಶಶಿ ಅವರು ಮಾತನಾಡಿ ಪ್ರದೀಪ್ ಅವರು ಅಂತರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿ, ಕೊಡುಗೈ ದಾನಿಯಾಗಿದ್ದಾರೆ. ಸಾರ್ಥಕತೆ ಎಂದರೆ ಏನು ಎಂಬುದನ್ನು ಪ್ರಚುರಪಡಿಸಿದ್ದಾರೆ. ನಮ್ಮ ಊರಿನಲ್ಲಿ ವಿಶ್ವ ಮಟ್ಟದಲ್ಲಿ ನಮ್ಮ ದೇಶ ಪ್ರತಿನಿಧಿಸಿರುವವರು, ಪ್ರಸಿದ್ದಿ ಪಡೆದವರು ಇದ್ದಾರೆ ಎಂಬುದೇ ನಮ್ಮ ಹೆಮ್ಮೆ. ಅನೇಕ ಧರ್ಮಕಾರ್ಯಗಳಿಗೆ, ವಿದ್ಯಾರ್ಥಿಗಳಿಗೆ, ಧಾರ್ಮಿಕ ಕ್ಷೇತ್ರಗಳಿಗೆ, ಸಮಾಜ ಸೇವೆ ಮಾಡಿದ್ದಾರೆ, ದಾನ ನೀಡಿದ್ದಾರೆ, ಸಿದ್ದಿ ಜನಾಂಗದ ಅಭಿವೃದ್ದಿಗೆ ಸಹಾಯ ಮಾಡಿದ್ದಾರೆ. ಅವರ ಧರ್ಮಪತ್ನಿ ಅನುರಾಧ ಅವರು ವಿಶ್ವಸಂಸ್ಥೆಯಲ್ಲಿ ಮಹಿಳೆಯರ ಪರವಾಗಿ ದನಿ ಎತ್ತಿ ರಾಮನಗರ ಕೀರ್ತಿ ಎತ್ತಿ ಹಿಡಿದಿದ್ದಾರೆ. ದಂಪತಿಗಳು ಆದರ್ಶಪ್ರಾಯರು, ರಾಮನಗರ ಜನತೆಯ ಪರವಾಗಿ ಅಭಿನಂದಿಸುವ ಜೊತೆಗೆ ನಗರಸಭೆಯಿಂದ ದಂಪತಿಗಳಿಗೆ ಪೌರಸನ್ಮಾನ ಮಾಡಲಾಗುವುದು ಎಂದು ಹೇಳಿದರು.

ವಸುದೇವ ಸೇವಾ ಅನರ್ಘ್ಯ ರತ್ನ ಪ್ರಶಸ್ತಿ ಜೊತೆಗೆ ಅಭಿನಂದನಾ ಸನ್ಮಾನ ಸ್ವೀಕರಿಸಿ ಮಾತನಾಡಿದ ಪ್ರದೀಪ್ ಅವರು, ಪ್ರಪಂಚದ ಯಾವ ಮೂಲೆಯಲ್ಲಿ ಯಾವುದೇ ಗೌರವ ಪಡೆದರೂ ಹುಟ್ಟಿದೂರಿನಲ್ಲಿ ಎಲ್ಲರ ಮಧ್ಯೆ ಸಿಗುವ ಗೌರವ ಅತ್ಯುನ್ನತವಾದದ್ದು. ನಾನು ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಎಲ್ಲ ಶಿಕ್ಷಣವನ್ನು ಸರ್ಕಾರಿ ಶಾಲೆಯಲ್ಲಿಯೇ ಪಡೆದುಕೊಂಡಿದ್ದೇನೆ, ಯಾವುದೇ ಖಾಸಗಿ ಶಾಲೆಯಲ್ಲಿ ಅಭ್ಯಾಸ ಮಾಡಿಲ್ಲ, ಅದಕ್ಕಾಗಿ ನಾನು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಗೆ ಋಣಿಯಾಗಿದ್ದೇನೆ. ಸಂವಿಧಾನದಲ್ಲಿ ಎಲ್ಲರೂ ಸಮಾನರು, ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಈಗಿನ ಪ್ರಧಾನಿ ಹೇಳಿದ್ದಲ್ಲ, ಅದು ಸಂವಿಧಾನದಲ್ಲೇ ಇದೆ. ಪ್ರಪಂಚದಲ್ಲಿ ಯಾರೂ ಬರೆಯದ ಸಂವಿಧಾನ ಡಾ.ಬಿ.ಆರ್.ಅಂಬೇಡ್ಕರ್ ಬರೆದಿದ್ದಾರೆ. ನಮ್ಮ ಇತಿಹಾಸ ನಮಗೆ ಸದಾ ನೆನಪಿರಬೇಕು, ನಾವು ಬಂದ ಹಾದಿ ನೆನೆಯಬೇಕು. ನಾವು ಏನೇ ಮಾಡಿದರೂ ಶ್ರಮವಾಗುತ್ತದೆ ಹೊರತು ಸಾಧನೆ ಆಗುವುದಿಲ್ಲ, ಸಮಾಜ ಗುರುತಿಸಿದರಷ್ಟೇ ಸಾಧನೆಯಾಗುತ್ತದೆ ಎಂದರು.

ಮಾಜಿ ಶಾಸಕ, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿಯ ಅಧ್ಯಕ್ಷ ಕೆ.ರಾಜು, ಬ್ರಾಹ್ಮಣ ಮಹಾಸಭಾ ತಾಲ್ಲೂಕು ಅಧ್ಯಕ್ಷ ಆರ್.ಜಿ.ಚಂದ್ರಶೇಖರ್, ಅನುರಾಧ ಪ್ರದೀಪ್, ಕೆ.ಆರ್.ನಾಗೇಶ್ ಅವರು ಮಾತನಾಡಿದರು.

ಸರ್ಕಾರಿ ಹಾಸ್ಟೆಲಿಗಳಿಗೆ ದಿಢೀರ್ ಭೇಟಿ



ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ವಾಸಂತಿ ಅಮರ್ ಭಾ ಆ ಸೇ. ರವರು ಇಂದು ದೇವನಹಳ್ಳಿ ನಗರದ ಸಮಾಜ ಕಲ್ಯಾಣ ಇಲಾಖೆಯಿಂದ ನಡೆಯುತ್ತಿರುವ ಡಾ. ಬಿ. ಆರ್.ಅಂಬೇಡ್ಕರ್ ಸರ್ಕಾರಿ ಹಾಸ್ಟೆಲ್ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿ ನಿಲಯ ಹಾಸ್ಟೆಲಿಗಳಿಗೆ ದಿಢೀರ್ ಭೇಟಿ ನೀಡಿ ವಿದ್ಯಾರ್ಥಿನಿಯರ ಕುಂದು ಕೊರತೆಗಳನ್ನು ವಿಚಾರಿಸಿದರು. ವಿದ್ಯಾರ್ಥಿನಿಯರ ಪ್ರತಿ ಕೊಠಡಿಗೂ ತೆರಳಿದ ಅವರು, ಹಾಸ್ಟೆಲ್‌ನಲ್ಲಿ ದೊರೆಯುತ್ತಿರುವ ಸೌಲಭ್ಯಗಳನ್ನು ಸಮರ್ಪಕವಾಗಿ ನೀಡಲಾಗುತ್ತಿದೆಯೇ ಎಂದು ವಿದ್ಯಾರ್ಥಿನಿಯರಿಂದ ಮಾಹಿತಿ ಪಡೆದರು.ಅಡುಗೆ ಕೋಣೆಯ ಪರಿಶೀಲನೆ ವೇಳೆ ಆಹಾರ ತಯಾರಿಕೆಯಲ್ಲಿ ತರಕಾರಿ ಪದಾರ್ಥಗಳನ್ನು ಹೆಚ್ಚು ಬಳಸಲು ಸೂಚಿಸಿದರು.ಅಡುಗೆ ಮನೆಯಲ್ಲಿ ಸಿದ್ಧಪಡಿಸಿಟ್ಟಿದ್ದ ಆಹಾರವನ್ನು ವಿದ್ಯಾರ್ಥಿನಿಯರ ಜೊತೆ ಊಟವನ್ನು ಸ್ವತಃ ಸೇವಿಸಿ ಗುಣಮಟ್ಟ ಪರಿಶೀಲಿಸಿದರು.

ಶೈಕ್ಷಣಿಕ ಅಭ್ಯಾಸ ಮತ್ತು ಆರೋಗ್ಯಕವಾದ ಸ್ವಚ್ಛತೆ ಬಗ್ಗೆ ಸವಿವಿವರವಾಗಿ ವಿದ್ಯಾರ್ಥಿನಿಯರ ಜೊತೆ ಸಮಾಲೋಚಿಸಿದರು.

ಕೇಂದ್ರ ಶಿಕ್ಷಣ ಸಚಿವ ರಾಜೀನಾಮೆಗಾಗಿ ಪಂಜಿನ ಮೆರವಣಿಗೆ

ಸೂರ್ಯಪ್ರಗತಿನ್ಯೂಸ್.ಕಾಂ



ಕುಣಿಗಲ್; ಕೇಂದ್ರ ಶಿಕ್ಷಣ ಸಚಿವ ರಾಜೀನಾಮೆ ವಿದ್ಯಾರ್ಥಿಗಳ ಮೇಲಿನ ದೌರ್ಜನ್ಯ ಖಂಡಿಸಿ ಶಾಸಕ ಡಾ. ಹೆಚ್ ಡಿ ರಂಗನಾಥ್ ನೇತೃತ್ವದಲ್ಲಿ ಯುವ ಕಾಂಗ್ರೆಸ್ ಘಟಕವು ಪಂಜಿನ ಮೆರವಣಿಗೆ ಕೈಗೊಳ್ಳಲಾಯಿತು

ಪಟ್ಟಣದಲ್ಲಿ ಕಳೆದ ರಾತ್ರಿ ಗ್ರಾಮದೇವತೆ ದೇವಾಲಯದಿಂದ ಹುಚ್ಚ ಮಾಸ್ತಿ ಗೌಡ ವೃತ್ತದ ವರಿಗೆ ಯುವ ಕಾಂಗ್ರೆಸ್ ಘಟಕವು ಪಂಜಿನ ಮೆರವಣಿಗೆ ನಡೆಸಿ ಕೇಂದ್ರ ಸರ್ಕಾರವು ನಡೆಸುವ ನೀಟ್ ಪರೀಕ್ಷೆಯಲ್ಲಿ ಅಕ್ರಮ ಪ್ರಶ್ನೆ ಪತ್ರಿಕೆ ಸೋರಿಕೆ ಸೇರಿದಂತೆ 21 ವಿದ್ಯಾರ್ಥಿಗಳು ಆತ್ಮಹತ್ಯೆಗೆ ಕಾರಣರಾದ ಕೇಂದ್ರಸರ್ಕಾರದ ಸಚಿವರು ಕೂಡಲೇ ರಾಜೀನಾಮೆ ನೀಡಬೇಕು ಉನ್ನತ ವ್ಯಾಸಂಗ ಕೈಗೊಂಡು ನೀಟ್ ಪರೀಕ್ಷೆ ಬರೆದ ವಿದ್ಯಾರ್ಥಿಗಳು ನ್ಯಾಯ ಕೇಳಲು ಮುಂದಾದಾಗ ಅವರ ಮೇಲೆ ಪೊಲೀಸರು ಅಲ್ಲೇ ದೌರ್ಜನ್ಯ ನಡೆಸಿರುವುದು ತೀವ್ರ ಖಂಡನೀಯ ನೂರಾರು ಯುವ ಕಾಂಗ್ರೆಸ್ ಕಾರ್ಯಕರ್ತರು ಕೇಂದ್ರ ಸರ್ಕಾರದ ಶಿಕ್ಷಣ ಮಂತ್ರಿಗಳಾದ ಧರ್ಮೇಂದ್ರ ಪ್ರಧಾನ ಕೂಡಲೇ ರಾಜೀನಾಮೆ ನೀಡುವಂತೆ ಪ್ರತಿ ಕೃತಿ ದಹಿಸಿ ಕೇಂದ್ರ ಸರ್ಕಾರದ ವಿರುದ್ಧ ದಿಕ್ಕಾರ ಘೋಷಣೆ ಕೂಗಿದರು ಶಾಸಕ ರಂಗನಾಥ ಮಾತನಾಡುತ್ತ ನೀಟ್ ಪರೀಕ್ಷೆ ಹೆಸರಿನಲ್ಲಿ ಕೇಂದ್ರ ಸರ್ಕಾರವು ಶಿಕ್ಷಣಕ್ಕೆ ಬೆಲೆ ಇಲ್ಲದಂತೆ ಮಾಡಿ ಹಗಲು ರಾತ್ರಿ ಕಷ್ಟಪಟ್ಟು ವಿದ್ಯಾರ್ಥಿಗಳು ವ್ಯಾಸಂಗ ಮಾಡಿ ಆದರೆ ಕೇಂದ್ರ ಸರ್ಕಾರದ ಆಡಳಿತ ನೀತಿಯಲ್ಲಿ ವಿದ್ಯಾರ್ಥಿಗಳ ಪ್ರಶ್ನೆ ಪತ್ರಿಕೆಗಳು ಸೋರಿಕೆ ಉಂಟಾಗಿ ಈಗಾಗಲೇ ದೇಶಾದ್ಯಂತ 21 ವಿದ್ಯಾರ್ಥಿಗಳು ಮೃತಪಟ್ಟಿರುವುದು ಕೇಂದ್ರ ಸರ್ಕಾರವು ಶಿಕ್ಷಣ ಸಚಿವರ ರಾಜೀನಾಮೆ ಪಡೆಯದೆ ಕೇವಲ ಕಣ್ಣು ಹರಿಸುವ ತಂತ್ರ ಅನುಸರಿಸುತ್ತಿದ್ದು ದೆಹಲಿಯಲ್ಲಿ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದರೆ ಪೊಲೀಸರ ಮೂಲಕ ಅಲ್ಲೇ ದೌರ್ಜನ್ಯ ನಟಿಸಿರುವ ಕ್ರಮವು ತೀವ್ರ ಖಂಡನೀಯವಾಗಿದೆ ಮುಂಬರುವಂತಹ ಸಂದರ್ಭದಲ್ಲಿ ಬಿಜೆಪಿ ಪಕ್ಷಕ್ಕೆ ದೇಶದ ಯುವಶಕ್ತಿ ತಕ್ಕ ಉತ್ತರ ನೀಡಲಿದ್ದಾರೆ ಕೇಂದ್ರ ಸರ್ಕಾರವು ನಡೆಸುತ್ತಿರುವ ನೀಟ್ ಪರೀಕ್ಷೆಯನ್ನು ರದ್ದುಗೊಳಿಸಿ ರಾಜ್ಯಗಳಲ್ಲಿ ಸಿಇಟಿ ಮಾದರಿಯಲ್ಲಿ ಪರೀಕ್ಷೆಗಳನ್ನ ನಡೆಸಬೇಕೆಂದು ಆಗ್ರಹಪಡಿಸಿದರು

ಈ ಪ್ರತಿಭಟನೆಯಲ್ಲಿ ಕೆಪಿಸಿಸಿ ಸದಸ್ಯ ಬೇಗೂರು ನಾರಾಯಣ.ಪ್ರಚಾರ ಸಮಿತಿಯ ಅಧ್ಯಕ್ಷ ಶಂಕರ್. ಮಾಜಿ ಪುರಸಭಾ ಸದಸ್ಯ ರಂಗಸ್ವಾಮಿ. ಜಯಲಕ್ಷ್ಮೀ .ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಣ್ಣ ಗೌಡ. ಯುವ ಕಾಂಗ್ರೆಸ್ ಅಧ್ಯಕ್ಷ ಸಂತೋಷ್. ಯುವ ಬ್ಲಾಕ್ ಅಧ್ಯಕ್ಷ ಮಾರುತಿ , ಹುಲಿಯೂರುದುರ್ಗ ಯುವ ಬ್ಲಾಕ್ ಅಧ್ಯಕ್ಷ ರಾಮು ಯೂಸಫ್ ನೂರಾರು ಯುವ ಕಾಂಗ್ರೆಸ್ ಕಾರ್ಯಕರ್ತರು ಭಾಗವಹಿಸಿದ್ದರು

ಪಾವಗಡದಲ್ಲಿ "ಗಡಿನಾಡು ಸಾಂಸ್ಕೃತಿಕ ಉತ್ಸವ"

ಎಂ ಏನ್ ನರಸಿಂಹಪ್ಪ

ಪಾವಗಡ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ವತಿಯಿಂದ ಹಾಗೂ ರಂಗಮಂದಿರ ಕಲಾ ಸೇವಾ ಟ್ರಸ್ಟ್, ಕೋಟಗುಡ್ಡ ಇವರ ಸಂಯುಕ್ತ ಆಶ್ರಯದಲ್ಲಿ ಪಾವಗಡ ತಾಲ್ಲೂಕಿನ ಕೋಟಗುಡ್ಡ ಸರ್ಕಾರಿ ಪಬ್ಲಿಕ್ ಶಾಲೆಯ ಆವರಣದಲ್ಲಿ "ಗಡಿನಾಡು ಸಾಂಸ್ಕೃತಿಕ ಉತ್ಸವ" ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.



ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷ ರಾಮಚಂದ್ರಪ್ಪ ಅವರು, ಪುರಾತನ ಕಲೆಗಳನ್ನು ಎತ್ತಿ ಹಿಡಿಯುವ ಹಾಗೂ ನಶಿಸಿ ಹೋಗುತ್ತಿರುವ ಕಲೆಗಳನ್ನು ಇಂದಿನ ಪೀಳಿಗೆಗೆ ಪರಿಚಯಿಸುವ ಉದ್ದೇಶದಿಂದ ಈ ರೀತಿಯ ಉತ್ಸವಗಳು ಅಗತ್ಯ ಎಂದು ಹೇಳಿದರು. "ಸೋಬಾನೆ ಪದ, ಅರೆವಾದ್ಯ, ತಮಟೆ ನೃತ್ಯ ಮತ್ತು ತಮಟೆ ಬಾರಿಸುವ ಕಲೆಯಂತಹ ನಮ್ಮ ಸಾಂಪ್ರದಾಯಿಕ ಕಲೆಗಳನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಂಡು ಮುಂದಿನ ಪೀಳಿಗೆಗೆ ವರ್ಗಾಯಿಸಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಕಲೆ ನಶಿಸದಂತೆ ನಾವೆಲ್ಲರೂ ಜವಾಬ್ದಾರಿ ತೆಗೆದುಕೊಳ್ಳಬೇಕು" ಎಂದು ಅವರು ಕರೆ ನೀಡಿದರು.

ಈ ಸಂದರ್ಭದಲ್ಲಿ ರಂಗತರಂಗ ಕಲಾ ಸೇವಾ ಟ್ರಸ್ಟ್‌ನ ಕಾರ್ಯದರ್ಶಿ ಹನುಮಂತರಾಯ ಏ.ಊ ಅವರು ಮಾತನಾಡಿ, ಕಲೆಯ ಸೊಗಡು ಮತ್ತು ಅದರ ಮಹತ್ವದ ಬಗ್ಗೆ ವಿವರಿಸಿದರು.

ಕಾರ್ಯಕ್ರಮದಲ್ಲಿ ಕಲಾವಿದರಾದ ಹನುಮಂತಪ್ಪಂ, ವೆಂಕಟರಮಣಪ್ಪ, ಆ.ಖಿ. ನರಸಿಂಹಮೂರ್ತಿ, ರಾಜಗೋಪಾಲ್ ಒ.ಕ, ಲಕ್ಷ್ಮಿ ಹಾಗೂ ಗ್ರಾಮದ ಸಾರ್ವಜನಿಕರು ಉಪಸ್ಥಿತರಿದ್ದರು. ವಿವಿಧ ಸಾಂಸ್ಕೃತಿಕ ತಂಡಗಳಿಂದ ನಡೆದ ನೃತ್ಯ ಮತ್ತು ವಾದ್ಯ ಪ್ರದರ್ಶನಗಳು ಕಾರ್ಯಕ್ರಮಕ್ಕೆ ಮೆರಗು ನೀಡಿದವು.

ಮಾದಕ ದ್ರವ್ಯಗಳ ವ್ಯಸನದಿಂದ ಬದುಕೇ ಹಾಳು

ಸೂರ್ಯಪ್ರಗತಿನ್ಯೂಸ್.ಕಾಂ

ಚಿಕ್ಕನಾಯಕನಹಳ್ಳಿ;-ಇಂದು ವಿದ್ಯಾರ್ಥಿಗಳು ಕೂತುಹಲಕ್ಕೆ, ಇಲ್ಲವೇ ಕೆಟ್ಟ ಸ್ನೇಹಿತರ ಸಹವಾಸದಿಂದ ಮಾದಕ ದ್ರವ್ಯಗಳ ವ್ಯಸನಕ್ಕೆ ತುತ್ತಾಗುತ್ತಾರೆ ಆದ್ದರಿಂದ ಕೆಟ್ಟ ದುಶ್ಚಟಗಳಿಂದ ವಿದ್ಯಾರ್ಥಿಗಳು ದೂರವಿದ್ದು ಕೇವಲ ಶಿಕ್ಷಣಕ್ಕೆ ತಮ್ಮ ಗಮನವನ್ನು ನೀಡಬೇಕು ಎಂದು ಶಾಸಕ ಸಿ.ಬಿ.ಸುರೇಶ್‌ಬಾಬು ತಿಳಿಸಿದರು.



ಪಟ್ಟಣದ ತೀನಂಶ್ರೀ ಭವನದಲ್ಲಿ ಪೊಲೀಸ್ ಇಲಾಖೆಯವತಿಯಿಂದ ಏರ್ಪಡಿಸಲಾಗಿದ್ದ ಮಾದಕ ದ್ರವ್ಯ ವಿರೋಧಿ ಜಾಗೃತಿ ಅಭಿಯಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ನಮ್ಮ ಬದುಕನ್ನು ಒಂದುಕೆಟ್ಟ ಚಟ ವ್ಯಸನದಿಂದ ಹಾಳು ಮಾಡುತ್ತವೆ ಅದರಲ್ಲೂ ಈ ಹದಿಹರೆಯದ ಮಕ್ಕಳು ಯಾವುದೋ ದುಶ್ಚಟಕ್ಕೆ ಇಲ್ಲವೇ ಆಕರ್ಷಣೆಗೆ ಇಲ್ಲವೇ ಅದರ ಬಗ್ಗೆ ಇರುವಂತಹ ಕುತೂಹಲಕ್ಕೂ ಈ ಮಾದಕ ದ್ರವ್ಯಗಳ ವ್ಯಸನಿಗಳಾಗುತ್ತಾರೆ ಇದರಿಂದ ವ್ಯಕ್ತಿಯ ಆರೋಗ್ಯ, ಕುಟುಂಬದ, ಸಮಾಜದ ನೆಮ್ಮದಿ ಹಾಳಾಗುತ್ತದೆ ಆದ್ದರಿಂದ ಮಕ್ಕಳು ಮಾದಕ ದ್ರವ್ಯದಿಂದ ದೂರವಿರಬೇಕು ಎಂದ ಅವರು ಕಾನೂನಾತ್ಮಕವಾಗಿ ಈ ಮಾದಕ ದ್ರವ್ಯಗಳನ್ನು ನಿಷೇದಿಸಿದ್ದರು ಅದು ಅಕ್ರಮವಾಗಿ ಸರಬರಾಜಾಗುತ್ತಿದೆ ಆದ್ದರಿಂದ ಇಂತಹದ್ದನ್ನು ನಮ್ಮ ರಕ್ಷಣಾ ಇಲಾಕೆ ಸೂಕ್ತವಾಗಿ ತಡೆದಾಗ ಮಾತ್ರ ನೆಮ್ಮದಿಯ ಜೀವನ ಸಾದ್ಯ. ಎಂದ ಅವರು ಇತ್ತಿಚೇಗೆ ತಾಲ್ಲೂಕಿನಲ್ಲಿ ಕಳ್ಳನೋಟು ಚಲಾವಣೆ, ಅಕ್ರಮವಾಗಿ ಗಾಂಜಾ ಬೆಳೆದಿದ್ದಂತಹ ಪ್ರಕರಗಳನ್ನು ಪತ್ತೆಹಚ್ಚಿರುವ ನಮ್ಮ ಪೊಲೀಸರ ಕಾರ್ಯ ಶ್ಲಾಘನೀಯ ಎಂದರು.

ತಿಪಟೂರಿನ ಡಿವೈಎಸ್ಪಿ ಉಮೇಶ್ ಮಾತನಾಡಿ ತಮ್ಮ ಜೀವಕ್ಕೆ ಹಾನಿಯುಂಟು ಮಾಡುವಂತಹ ಮಾದಕ ದ್ರವ್ಯವನ್ನು ಜನರು ತಮ್ಮ ನೋವನ್ನು ಮರೆಯಲು ಉಪಯೋಗಿಸುತ್ತಾರೆ ಅದರಂತೆ ಕ್ರಮೇನ ಅದಕ್ಕೆ ದಾಸರಾಗಿ ವ್ಯಸನಿಗಳಾಗುತ್ತಾರೆ. ಆದ್ದರಿಂದ ಇಂತಹ ಮಾದಕ ವ್ಯಸನಿಗಳಾಗುವುದನ್ನು ಬಿಟ್ಟು ಉತ್ತಮವಾದ ಆರೋಗ್ಯ ದೇಹ ಹಾಗೂ ಮನಸ್ಸನ್ನು ಬೆಳೆಸಿಕೊಳ್ಳಿ ಎಂದರು. ಮನಸ್ಸಿನ ಕಾರ್ಯಕ್ರಮದಲ್ಲಿ ಬಿಇಒ ಕಾಂತರಾಜು, ಪಿಎಸ್‌ಐಗಳಾದ ಹೇಮಂತ್ , ದ್ರಾಕ್ಷಾಯಿಣಿ, ನವೋದಯ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ರವಿ ಕುಮಾರ್, ಡಾ. ಸುಮಾ ಇದ್ದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಮಾದಕ ದ್ರವ್ಯ ವಿರೋಧಿ ಪ್ರತಿಜ್ಞಾವಿಧಿ ಬೋಧಿಸಿದರು.

ಸಂಗೀತ ಕ್ಷೇತ್ರಕ್ಕೆ ಎಸ್.ಜಾನಕಿ ಅಮ್ಮನ ಕೊಡುಗೆ ಅಪಾರ; ಸ್ವರನಮನ ಕಾರ್ಯಕ್ರಮ



ತುಮಕೂರು: ದೇಶದ ಸಂಗೀತಕ್ಷೇತ್ರಕ್ಕೆ ಎಸ್.ಜಾನಕಿ ಅಮ್ಮನ ಕೊಡುಗೆ ಅಪಾರವಾದುದು ಸುಮಾರು 17 ಭಾಷೆಗಳಲ್ಲಿ,48 ಸಾವಿರ ಹಾಡುಗಳನ್ನು ಹಾಡಿ ಸಂಗೀತ ಕ್ಷೇತ್ರವನ್ನು ಶ್ರೀಮಂತ ಗೊಳಿಸಿದವರು ಎಸ್.ಜಾನಕಿ, ಹಿನ್ನಲೆ ಗಾಯಕಿಯಾಗಿ ಸುಮಾರು 4ದಶಕಗಳ ಕಾಲ ಸಂಗೀತ ರಸಿಕರನ್ನು ತನ್ನ ಹಾಡುಗಳ ಮೂಲಕ ರಂಜಿಸುತ್ತಾ ಸಂಗೀತ ಸರಸ್ವತಿಯ ಸೇವೆಯನ್ನು ಮಾಡುತ್ತಾ ಸಂಗೀತ ಕ್ಷೇತ್ರಕ್ಕೆ ಅವರು ನೀಡಿದ ಕೊಡುಗೆ ಅವಿಸ್ಮರಣೀಯವಾದುದು, ಭಾರತೀಯರಾದ ನಾವುಗಳು ಎಸ್.ಜಾನಕಿಯಂತವರನ್ನು ಪಡೆದಿದ್ದಕ್ಕೆ ಹೆಮ್ಮೆ ಪಡಬೇಕು ಎಂದು ಸಂಕಲ್ಪ ಗ್ರಾಮೀಣ ಮತ್ತು ನಗರಾಭಿವೃದ್ಧಿ ಸಂಘ(ರಿ)ನ ಅಧ್ಯಕ್ಷರಾದ ಟಿ.ಎಸ್.ಮೋಹನ್ ಕುಮಾರ್ ರವರು ತಿಳಿಸಿದರು.

ಅವರು ಇಂದು ಜಯನಗರ ಪಶ್ಚಿಮ ಬಡಾವಣೆಯಲ್ಲಿರುವ ಶ್ರೀಬನಶಂಕರಿ ದೇವಾಲಯದ ಆವರಣದಲ್ಲಿ ಸಂಕಲ್ಪ ಗ್ರಾಮೀಣ ಮತ್ತು ನಗರಾಭಿವೃದ್ಧಿ ಸಂಘ(ರಿ) ಮತ್ತು ನಿರ್ಭಯ ಮಹಿಳಾ ಜಾಗೃತಿ ವೇದಿಕೆ(ರಿ) ಜಂಟಿಯಾಗಿ ಆಯೋಜಿಸಿದ್ದ ದಿವಂಗತ ಎಸ್.ಜಾನಕಿ ಸ್ವರನಮನ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ನಿರ್ಭಯ ಮಹಿಳಾ ಜಾಗೃತಿ ವೇದಿಕೆ(ರಿ)ಯ ಅಧ್ಯಕ್ಷರಾದ ಶ್ರೀಮತಿ ಗೀತಾ ನಾಗೇಶ್ ರವರು ಎಸ್.ಜಾನಕಿರವರು ಸಂಗೀತ ಕ್ಷೇತ್ರದಲ್ಲಿ ಗಳಿಸಿದ ಕೀರ್ತಿ ಅಪಾರವಾದುದು ಹಿರಿಯರಿಗೆ ಅವರು ನೀಡುತ್ತಿದ್ದ ಗೌರವ, ಸಂಸ್ಕಾರ ದೊಡ್ಡದು,ಅವರು ಎಷ್ಟೇ ಎತ್ತರಕ್ಕೆ ಏರಿದರೂ ಸಹ ಎಲ್ಲರೊಂದಿಗೆ ಸಾಮಾನ್ಯರಾಗಿ ಬೆರೆಯುತ್ತಿದ್ದರು, ಅವರ ಕಂಠಕ್ಕೆ ಮನ ಸೋಲದೆ ಇರುವವರು ಯಾರೂ ಇಲ್ಲ ಅಂತಹ ಅದ್ಭುತ ಕಂಠ ಅವರದ್ದು,ನಿಜಕ್ಕೂ ಅವರ ಸಂಸ್ಕಾರ ದೊಡ್ಡದು,ಅವರು ಹಾಕಿಕೊಟ್ಟ ಮಾರ್ಗದಲ್ಲಿ ಇಂದಿನ ಯುವ ಪೀಳಿಗೆ ಮುಂದುವರೆಯ ಬೇಕು,ಎಸ್.ಜಾನಕಿ ನಿಜಕ್ಕೂ ಸರಸ್ವತಿಯ ವರಪುತ್ರಿ,ಅಸಂಖ್ಯಾತ ಅಭಿಮಾನಿಗಳನ್ನು ಬಿಟ್ಟು ಹೋಗಿದ್ದಾರೆ, ಕನ್ನಡದಲ್ಲಿ ಅವರು 10ಸಾವಿರ ಹಾಡುಗಳನ್ನು ಹಾಡಿದ್ದಾರೆ,ಕನ್ನಡದ ಬಗ್ಗೆ ಅವರಿಗಿದ್ದ ಪ್ರೇಮ ಅಪಾರವಾದುದು, ಕನ್ನಡ ಭಾಷೆಯನ್ನು ಪ್ರೀತಿಸುತ್ತಿದ್ದರು, ಆರಾಧಿಸುತ್ತಿದ್ದರು, ಕನ್ನಡಿಗರ ಮೇಲೆ ಅವರದ್ದು ವಿಶೇಷ ಪ್ರೇಮವಿತ್ತು,ತಮ್ಮ ಕೊನೆಯ ದಿನಗಳನ್ನು ಅವರು ಮೈಸೂರಿನಲ್ಲಿಯೇ ಕಳೆದರು, ಅವರ ಹೆಸರಿನಲ್ಲಿ ಇಂದು ನಡೆಯುತ್ತಿರುವ ಸಂಗೀತ ಸಂಜೆ ನಿಜಕ್ಕೂ ಅದ್ಭುತ,ಅವರ ಒಂದೊಂದು ಹಾಡುಗಳು ಸಮಾಜಕ್ಕೆ ಜೀವನಕ್ಕೆ ಹತ್ತಿರವಾದುದು ಎಂದು ತಿಳಿಸಿದರು. ದಿವ್ಯದೃಷ್ಠಿ ಕಲಾ ಮತ್ತು ಸಾಂಸ್ಕೃತಿಕ ಸಂಸ್ಥೆಯ ಸದಸ್ಯರು ಎಸ್.ಜಾನಕಿರವರು ಹಾಡಿರುವ ಹಾಡುಗಳನ್ನು ಹಾಡಿದರು.

ವೇದಿಕೆಯಲ್ಲಿ ಭಕ್ತವತ್ಸಲ, ಜಲಜ ಜೈನ್, ಝೀಟಿವಿ ಸರಿಗಮಪ ಖ್ಯಾತಿಯ ಕುಸುಮಜೈನ್, ಲತಾನಾರಾಯಣ್, ಶೈಲಜವೆಂಕಟೇಶ್, ಜ್ಯೋತಿಆಚಾರ್ಯ, ಶ್ರೀಮತಿ ನಂದಿನಿ, ರುದ್ರಮೂರ್ತಿಎಲೆರಾಂಪುರ, ಅಂಬಿಕ, ಚೇತನ್ ಮತ್ತಿತರರು ಉಪಸ್ಥಿತರಿದ್ದರು.

ಶಾಲಾ ಮಕ್ಕಳಿಗೆ ನೋಟ್‌ಬುಕ್ ವಿತರಿಸಿ ಹುಟ್ಟುಹಬ್ಬ ಆಚರಣೆ

ವರದಿ ಗುಬ್ಬಿ ಭರತ್

ಗುಬ್ಬಿ,: ಹುಟ್ಟುಹಬ್ಬವನ್ನು ಕೇವಲ ಸಂಭ್ರಮಕ್ಕೆ ಸೀಮಿತಗೊಳಿಸದೆ ಸಮಾಜಮುಖಿ ಸೇವೆಯ ಮೂಲಕ ಆಚರಿಸುವ ಪರಂಪರೆಯನ್ನು ಮುಂದುವರಿಸಿರುವ ಜೆಡಿಎಸ್ ಮುಖಂಡ ಹಾಗೂ ಎಪಿಎಂಸಿ ಮಾಜಿ ಅಧ್ಯಕ್ಷ ಕಳ್ಳಿಪಾಳ್ಯ ಲೋಕೇಶ್ ಅವರು, ಅಡಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಿವಿಧ ಸರ್ಕಾರಿ ಶಾಲೆಗಳ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ಹಾಗೂ ಲೇಖನ ಸಾಮಗ್ರಿಗಳನ್ನು ವಿತರಿಸುವ ಮೂಲಕ ತಮ್ಮ ಜನ್ಮದಿನವನ್ನು ಅರ್ಥಪೂರ್ಣವಾಗಿ ಆಚರಿಸಿದರು.



ಕಾರ್ಯಕ್ರಮದ ಅಂಗವಾಗಿ ಕಳ್ಳಿಪಾಳ್ಯ, ಸಿಂಗೋನಹಳ್ಳಿ, ಅಡಗೂರು, ಪ್ರಭುವನಹಳ್ಳಿ ಹಾಗೂ ಹಳೆಗುಬ್ಬಿ ಸೇರಿದಂತೆ ವಿವಿಧ ಸರ್ಕಾರಿ ಶಾಲೆಗಳ 400ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ನೋಟ್‌ಬುಕ್, ಪೆನ್, ಪೆನ್ಸಿಲ್ ಸೇರಿದಂತೆ ಅಗತ್ಯ ಶೈಕ್ಷಣಿಕ ಸಾಮಗ್ರಿಗಳನ್ನು ವಿತರಿಸಲಾಯಿತು. ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಆಯೋಜಿಸಿದ್ದ ಈ ಕಾರ್ಯಕ್ರಮಕ್ಕೆ ಸಾರ್ವಜನಿಕರು ಹಾಗೂ ಪೋಷಕರಿಂದ ವ್ಯಾಪಕ ಮೆಚ್ಚುಗೆ ವ್ಯಕ್ತವಾಯಿತು.

ನಂತರ ನಡೆದ ಸರಳ ಸಮಾರಂಭದಲ್ಲಿ ಅಭಿಮಾನಿಗಳು, ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಕೇಕ್ ಕತ್ತರಿಸುವ ಮೂಲಕ ಲೋಕೇಶ್ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು. ಇದೇ ವೇಳೆ ಹಲವು ಮುಖಂಡರು ಮಾತನಾಡಿ, ರಾಜಕೀಯದ ಜೊತೆಗೆ ಸಮಾಜಸೇವೆಯಲ್ಲಿಯೂ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಲೋಕೇಶ್ ಅವರ ಸೇವಾ ಮನೋಭಾವವನ್ನು ಶ್ಲಾಘಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕಳ್ಳಿಪಾಳ್ಯ ಲೋಕೇಶ್, "ಸಮಾಜ ನನಗೆ ನೀಡಿರುವ ಪ್ರೀತಿ, ವಿಶ್ವಾಸ ಮತ್ತು ಬೆಂಬಲಕ್ಕೆ ಕೃತಜ್ಞತೆಯ ಸಂಕೇತವಾಗಿ ಸಮಾಜಮುಖಿ ಕಾರ್ಯಗಳನ್ನು ನಿರಂತರವಾಗಿ ಕೈಗೊಳ್ಳುತ್ತಿದ್ದೇನೆ. ಮಕ್ಕಳ ಶಿಕ್ಷಣಕ್ಕೆ ನೆರವಾಗುವುದು ಅತ್ಯಂತ ಪುಣ್ಯದ ಕೆಲಸ. ಸರ್ಕಾರಿ ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳಿಗೆ ಅಗತ್ಯ ಶೈಕ್ಷಣಿಕ ಸಾಮಗ್ರಿಗಳನ್ನು ಒದಗಿಸುವ ಮೂಲಕ ಅವರ ಭವಿಷ್ಯ ರೂಪುಗೊಳ್ಳಲು ನನ್ನಿಂದಾಗುವ ಸಣ್ಣ ಸಹಾಯ ಮಾಡುತ್ತಿರುವುದು ಸಂತಸ ತಂದಿದೆ. ಮುಂದಿನ ದಿನಗಳಲ್ಲಿಯೂ ಶಿಕ್ಷಣ, ಆರೋಗ್ಯ ಹಾಗೂ ಸಮಾಜದ ಅಭಿವೃದ್ಧಿಗೆ ಸಂಬಂಧಿಸಿದ ಸೇವಾ ಕಾರ್ಯಕ್ರಮಗಳನ್ನು ನಿರಂತರವಾಗಿ ಮುಂದುವರಿಸುತ್ತೇನೆ," ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜೆಡಿಎಸ್ ಜಿಲ್ಲಾಧ್ಯಕ್ಷ ಹೆಚ್.ನಿಂಗಪ್ಪ,ತಾಲೂಕು ಜೆಡಿಎಸ್ ಮುಖಂಡರಾದ ಬಿ.ಎಸ್. ನಾಗರಾಜು, ಯೋಗಾನಂದ ಕುಮಾರ್, ಸಿಂಗೋನಹಳ್ಳಿ ಸೋಮಣ್ಣ, ಕಾಂತರಾಜು, ಹೊಸಪಾಳ್ಯ ವೆಂಕಟೇಶ್, ವೀರಭದ್ರೇಗೌಡ, ಶಂಕರೇಗೌಡ, ರಂಗನಾಥ್, ಸೋಮಶೇಖರ್, ನಾಗರಾಜು ಸೇರಿದಂತೆ ಪಕ್ಷದ ಮುಖಂಡರು, ಕಾರ್ಯಕರ್ತರು, ಶಿಕ್ಷಕರು, ಪೋಷಕರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದು, ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಪೆಟ್ರೋಲ್ ಬಂಕ್‌ನಲ್ಲಿ ನಿಗದಿತ ದರಕ್ಕಿಂತ ಹೆಚ್ಚುವರಿ ಹಣ ವಸೂಲಿ

ತುಮಕೂರು: ಜಿಲ್ಲೆ ಪಾವಗಡ ತಾಲೂಕಿನ ವೈ.ಎನ್. ಹೊಸಕೋಟೆಯ ದೊಡ್ಡಹಳ್ಳಿ ಮುಖ್ಯ ರಸ್ತೆಯ ವಾಸವಿ ಆಂಗ್ಲ ಮಾಧ್ಯಮ ಶಾಲೆಯ ಪಕ್ಕದಲ್ಲಿರುವ ಗಂಗಾಧರಯ್ಯ ಎಚ್.ಪಿ ಪೆಟ್ರೋಲ್ ಬಂಕ್‌ನಲ್ಲಿ ನಿಗದಿತ ದರಕ್ಕಿಂತ ಹೆಚ್ಚುವರಿ ಹಣ ವಸೂಲಿ ಮಾಡಲಾಗುತ್ತಿದೆ ಎಂದು ಆರೋಪಿಸಿ ಸ್ಥಳೀಯ ನಿವಾಸಿ ಜಯರಾಮು ಎಂ. ಸಿ. ಅವರು ಪೊಲೀಸರಿಗೆ ದೂರು ನೀಡಿದ್ದಾರೆ.

ಜುಲೈ 24 ರಂದು ವಾಹನಕ್ಕೆ ಇಂಧನ ತುಂಬಿಸಲು ಹೋದಾಗ ಸಿಬ್ಬಂದಿ ಕಮಿಷನ್ ಹೆಸರಿನಲ್ಲಿ ಹೆಚ್ಚುವರಿ ಹಣ ಕೇಳಿದರು. ನೀಡಲು ನಿರಾಕರಿಸಿದಾಗ ಇಂಧನ ಹಾಕಲು ನಿರಾಕರಿಸಿ ಅನುಚಿತವಾಗಿ ವರ್ತಿಸಿ ಬೆದರಿಕೆ ಹಾಕಿದರು ಎಂದು ದೂರಿನಲ್ಲಿ ತಿಳಿಸಿದ್ದಾರೆ. ಬಂಕ್‌ನಲ್ಲಿ ಈ ರೀತಿ ನಿಯಮಿತವಾಗಿ ಹೆಚ್ಚುವರಿ ಹಣ ವಸೂಲಿ ನಡೆಯುತ್ತಿದೆ ಎಂದು ಅವರು ಆರೋಪಿಸಿದ್ದಾರೆ.

ಈ ಬಗ್ಗೆ ಪೊಲೀಸ್ ಮೂಲಗಳು ನೀಡಿರುವ ಮಾಹಿತಿಯಂತೆ, ಕಳೆದ 3 ತಿಂಗಳಿಂದ ಬಂಕ್‌ನಲ್ಲಿ ನಾರ್ಮಲ್ ಪೆಟ್ರೋಲ್ ಲಭ್ಯವಿಲ್ಲ. ಕೇವಲ ಪವರ್ ಪೆಟ್ರೋಲ್ ಮಾತ್ರ ಇದೆ. ಪವರ್ ಪೆಟ್ರೋಲ್ ದರ ಹೆಚ್ಚಿರುವುದರಿಂದಲೇ ಗ್ರಾಹಕ ಮತ್ತು ಸಿಬ್ಬಂದಿ ನಡುವೆ ವಾಗ್ವಾದ ನಡೆದಿದೆ ಎಂದು ಹೇಳಿದ್ದಾರೆ.

ಸ್ಥಳೀಯರು ಕೂಡ ನಾರ್ಮಲ್ ಪೆಟ್ರೋಲ್ ಸಿಗುತ್ತಿಲ್ಲ ಎಂದು ದೂರಿದ್ದಾರೆ. ಪ್ರಕರಣ ಸಂಬಂಧ ಪೊಲೀಸರು ದೂರು ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಸೂರ್ಯ ಪ್ರಗತಿ
ಕನ್ನಡ ದಿನ ಪತ್ರಿಕೆ
ಸಂಪರ್ಕಿಸಿ: 9901010109

ಫಲಾನುಭವಿಗಳಿಗೆ ಪಂಪ್, ಮೋಟಾರ್ ವಿತರಣೆ



ತುಮಕೂರು: ಅಲ್ಪಸಂಖ್ಯಾತರಅಭಿವೃದ್ಧಿ ನಿಗಮದಿಂದತುಮಕೂರುಗ್ರಾಮಾಂತರಕ್ಷೇತ್ರದ ಫಲಾನುಭವಿಗಳಿಗೆ ಶಾಸಕ ಬಿ. ಸುರೇಶ್‌ಗೌಡರು ಶನಿವಾರನಗರದತಮ್ಮಕಚೇರಿಯಲ್ಲಿಪಂಪು, ಮೋಟಾರ್ ವಿತರಿಸಿದರು. ನಿಗಮದಿಂದ ಫಲಾನುಭವಿಗಳ ಜಮೀನಿನಲ್ಲಿಕೊರೆದಿರುವ ಕೊಳವೆಬಾವಿಗಳಿಗೆ ಸಂಪರ್ಕಒದಗಿಸಲುಪಂಪು, ಮೋಟಾರ್, ಪೈಪ್ ಹಾಗೂ ಇತರೆ ಸಾಮಗ್ರಿಗಳನ್ನು ವಿತರಿಸಿದರು. ಈ ವೇಳೆ ಮುಖಂಡರಾದ ಸಿದ್ಧೇಗೌಡರು, ಹೊಳಕಲ್ಲುಗ್ರಾಮ ಪಂಚಾಯ್ತಿ ಮಾಜಿಅಧ್ಯಕ್ಷ ಎ.ಹೆಚ್. ಆಂಜನಪ್ಪ, ಫಲಾನುಭವಿಗಳಾದ ಮಸೂದ್‌ಉಲ್ಲಾಖಾನ್, ಜಬ್ಬರ್‌ಖಾನ್, ಸೈಯದ್‌ದಸ್ತಗೀರ್, ಮುಖಂಡರಾದ ನರುಗನಹಳ್ಳಿ ಕುಮಾರ್, ಅಮಿದ್, ರಮೇಶ್, ವೀರನಾಯಕನಹಳ್ಳಿ ರಾಮಕೃಷ್ಣಯ್ಯ, ನಿಗಮದ ವ್ಯವಸ್ಥಾಪಕ ಮಹಮ್ಮದ್‌ಅಲೀಮ್‌ಉಲ್ಲಾಇತರರು ಭಾಗವಹಿಸಿದ್ದರು.

ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಕಾರ್ಯಕ್ರಮ ಅತ್ಯಗತ್ಯ

ಸೂರ್ಯಪ್ರಗತಿನ್ಯೂಸ್.ಕಾಂ



ಪಾವಗಡ, ವಿದ್ಯಾರ್ಥಿಗಳ ಜೀವನದಲ್ಲಿ ಓದುವಿನ ಮತ್ತು ಕ್ರೀಡಾ ವಿಭಾಗದಲ್ಲಿ ಎಷ್ಟು ಆಸಕ್ತಿ ವಹಿಸುವುದು ಮುಖ್ಯವೋ ಅರಸ ಪ್ರಶ್ನೆ ಕಾರ್ಯಕ್ರಮವು ಕೂಡ ಜ್ಞಾನಾರ್ಜನೆಗೆ ಅಷ್ಟೇ ಮುಖ್ಯ ಎಂದು ಶಿಶು ಸಂಕ್ಷೇಮ ಮತ್ತು ಮಹಿಳಾ ಅಧಿಕಾರಿ ಸುನಿತಾ ಅಭಿಪ್ರಾಯ ವ್ಯಕ್ತಪಡಿಸಿದರು. ಶನಿವಾರ ಪಾವಗಡದಲ್ಲಿ ನಡೆದ ಜಿಲ್ಲಾ ಬಾಲ ಭವನ ಕಮಿಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತಾಲೂಕು ಬಾಲ ಭವನ, ಕ್ಷೇತ್ರ ಸಂಪನ್ಮೂಲ ಕೇಂದ್ರದಿಂದ ಹಮ್ಮಿಕೊಳ್ಳಲಾಗಿದ್ದ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸೋಲು ಗೆಲುವು ಜೀವನದಲ್ಲಿ ಎಲ್ಲವೂ ಸಮಾನವಾಗಿ ಸ್ವೀಕರಿಸಿ ತಮ್ಮ ಗುರಿಯನ್ನು ಮುಟ್ಟಿಕೊಳ್ಳುವುದರಲ್ಲಿ ವಿದ್ಯಾರ್ಥಿಗಳು ತಮ್ಮ ಮನಸುಗಳನ್ನು ಹಿಡಿತದಲ್ಲಿ ಇಟ್ಟುಕೊಂಡು ಗುರಿ ತಲುಪುವುದರಲ್ಲಿ ಪಟ್ಟು ಸಾಧಿಸಬೇಕೆಂದು ಹಿತನುಡಿ ಹೇಳಿದರು. ಮೊಬೈಲ್ ನಿಂದ ದೂರ ಇದ್ದಷ್ಟು ನಾವು ಸಮಾಜದಲ್ಲಿ ಉನ್ನತ ಮಟ್ಟಕ್ಕೆ ಏರಬಹುದೆಂದು ತಾಂತ್ರಿಕ ಯುಗದಲ್ಲಿ ಕಂಪ್ಯೂಟರ್ ಬಳಕೆಯನ್ನು ಸದ್ಬಳಕೆ ಮಾಡಿಕೊಂಡು ಪುರುಷರು ಮಹಿಳೆಯರು ಸಮಾನವಾಗಿ ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮಾಡುವ ಗುರಿಯನ್ನು ಹೊಂದಿರಬೇಕೆಂದು ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಲಕ್ಷ್ಮೀನರಸಮ್ಮ ತಿಳಿಸಿದರು. ಪ್ರಾಥಮಿಕ ಮತ್ತು ಪ್ರೌಢಶಾಲೆಯಿಂದ ಪಾಲ್ಗೊಂಡು ಮೂರನೇ ರಾಂಕ್ ಪಡೆದ ವಿದ್ಯಾರ್ಥಿಗಳನ್ನು ವೆಂಕಟೇಶ್ವರ ಇಂಗ್ಲೀಷ್ ಮೀಡಿಯಂ ಪಾಠಶಾಲಾದಿಂದ ಇಕ್ರ ಅಂಜುಮಂ, ಹರಿತ ಕೇಸರಿ, ಶಾಹಿಂ ತಾಜ್, ಮೇಘನಾ, ನರೇಂದ್ರ ಮೋಕ್ಷಜ್ಞರವರನ್ನು ಪಾಠಶಾಲೆ ಯಜಮಾನರಾದ ಪರಂದಾಮರೆಡ್ಡಿ ಉಪಾಧ್ಯಾಯರಾದ,ರಾಮಕೃಷ್ಣ, ಚಿತ್ತಯ ಮತ್ತಿತರರು ವಿದ್ಯಾರ್ಥಿಗಳನ್ನು ಅಭಿನಂದಿಸಿ ಪ್ರೋತ್ಸಾಹಿಸಿದರು.

ಅಬಕಾರಿ ಇ-ಹರಾಜು

2025-26 ರ ಆಯವ್ಯಯ ಘೋಷಣೆಯಂತೆ ಕರ್ನಾಟಕ ಸರ್ಕಾರವು ಖಾಲಿ ಅಥವಾ ಲಭ್ಯವಿರುವ ಮದ್ಯದ ಸನ್ನದುಗಳನ್ನು ಪಾರದರ್ಶಕ ಎಲೆಕ್ಟ್ರಾನಿಕ್ ಹರಾಜಿನ ಮೂಲಕ ಹಂಚಿಕೆ ಮಾಡಿ, ಹೆಚ್ಚುವರಿ ರಾಜಸ್ವ ಸಂಗ್ರಹಣೆ ಮಾಡುವ ನಿರೀಕ್ಷಿಸಿದೆ ಎಂದು ಪ್ರಸ್ತಾಪಿಸಿದ ಹಿನ್ನೆಲೆಯಲ್ಲಿ ,ಅಬಕಾರಿ ಇಲಾಖೆಯುಅಬಕಾರಿ ನಿಯಮಗಳಿಗೆ ಅಗತ್ಯ ತಿದ್ದುಪಡಿಗಳನ್ನು ತಂದು, ಒಟ್ಟಾರೆ 579 ಸನ್ನದುಗಳನ್ನು ಎಲೆಕ್ಟ್ರಾನಿಕ್ ಇ-ಹರಾಜು ಮೂಲಕ ಹಂಚಿಕೆ ಮಾಡಲು ಸರ್ಕಾರವು ಅಧಿಸೂಚನೆ ಹೊರಡಿಸಿದೆ.

ಸ್ಥಗಿತಗೊಂಡಿರುವ ಮತ್ತು ಹಂಚಿಕೆಯಾಗದೇ ಇರುವ ಸಿಎಲ್-2 ಮತ್ತು ಸಿಎಲ್(11-ಸಿ) ಸನ್ನದುಗಳನ್ನು ಸಿಎಲ್(2-ಎ) ಎಂದು ಮತ್ತು ಸ್ಥಗಿತಗೊಂಡಿರುವ ಸಿಎಲ್-9 ಸನ್ನದುಗಳನ್ನು ಸಿಎಲ್(9-ಎ) ಎಂದು ವರ್ಗೀಕರಿಸಿ 569 ಸನ್ನದುಗಳ ಪೈಕಿ ಹರಾಜು ಪ್ರಕ್ರಿಯೆಗೆ 483 ಸಿಎಲ್(2-ಎ) ಮತ್ತು 96 ಸಿಎಲ್(9-ಎ) ಸನ್ನದುಗಳನ್ನು ಇ-ಹರಾಜಿಗೆ ಪ್ರಕಟಿಸಲಾಗಿದೆ. ಸರ್ಕಾರವು ಸಿಎಲ್(2-ಎ) ಮತ್ತು ಸಿಎಲ್(9-ಎ) ಸನ್ನದುಗಳನ್ನು ಇ-ಹರಾಜಿನಲ್ಲಿ ಹರಾಜು ಮಾಡಲಿದೆ.ವಿವಿಧ ವರ್ಗಗಳಿಗೆ ಮೀಸಲಾತಿ ಕಲ್ಪಿಸಲಾಗಿದೆ.ಬಿಡ್‌ದಾರರ ನೋಂದಣಿಯು ಜುಲೈ 3 ರಿಂದ ಪ್ರಾರಂಭವಾಗಿದ್ದು,ನೇರ ಹರಾಜು (ಖುತಜ ಬಜಜುಟಿರ)ಜುಲೈ 24ರಿಂದ 31ರವರೆಗೆ ಜರುಗಲಿದೆ.ಇ-ಹರಾಜು ಅಧಿಸೂಚನೆ ಮತ್ತು ಬಿಡ್ಡಿಂಗ್‌ಗಾಗಿ ನೋಂದಾಯಿಸಿಕೊಳ್ಳುವ ವಿಧಾನವು ಅಬಕಾರಿ ಇಲಾಖೆಯ https://stateexcise.karnataka.gov.in ರಲ್ಲಿ ಮತ್ತು MSTC ಇ-ಹರಾಜು ಪೋರ್ಟಲ್ https://www.mstcecommerce.com. ನಲ್ಲಿ ಲಭ್ಯವಿರುತ್ತದೆ ಎಂದು ಅಬಕಾರಿ ಆಯುಕ್ತರಾದ ಆರ್.ವೆಂಕಟೇಶಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಣಿಗಲ್ ಪಟ್ಟಣದ ಎಲ್ಲಾ ವಾರ್ಡುಗಳ ರಸ್ತೆಗಳ ಡಾಂಬರೀಕರಣ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರಿಂದ 90 ಕೋಟಿ ಅನುದಾನ

ಸೂರ್ಯಪ್ರಗತಿನ್ಯೂಸ್.ಕಾಂ



ಕುಣಿಗಲ್; ಪಟ್ಟಣದ ಎಲ್ಲಾ ವಾರ್ಡುಗಳ ರಸ್ತೆಗಳ ಡಾಂಬರೀಕರಣ ಕೈಗೊಳ್ಳಲು ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರಿಂದ 90 ಕೋಟಿ ಅನುದಾನ ಬೇಡಿಕೆ ಸಲ್ಲಿಸಲಾಗಿದೆ ಎಂದು ಶಾಸಕ ಡಾಕ್ಟರ್ ಎಚ್ ಡಿ ರಂಗನಾಥ್ ತಿಳಿಸಿದರು

ಪಟ್ಟಣದ ಹಲವಾರು ಬಡಾವಣೆಗಳಲ್ಲಿ ಮೂಲಸೌಕರ್ಯ ಯೋಜನೆ ಅಡಿಯಲ್ಲಿ ತುಮಕೂರು ರಸ್ತೆಯಿಂದ ದಿವ್ಯ ಪ್ಯಾಲೇಸ್ ಹಾಗೂ ಹೌಸಿಂಗ್ ಬೋರ್ಡ್ ವಾರ್ಡ್ ನಂಬರ್ 18ರಲ್ಲಿ ಸೇರಿದಂತೆ ವಿವಿಧ ಭಾಗಗಳಲ್ಲಿ 3 ಕೋಟಿ ವೆಚ್ಚದಲ್ಲಿ ಡಾಂಬರೀಕರಣ ಚರಂಡಿ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡುತ್ತಾ ಪಟ್ಟಣದ ಎಲ್ಲಾ ವಾರ್ಡುಗಳಲ್ಲಿಯೂ ಉತ್ತಮವಾದ ಗುಣಮಟ್ಟದ ರಸ್ತೆ ಚರಂಡಿ ಕೈಗೊಳ್ಳಲು ಮುಖ್ಯಮಂತ್ರಿ ಡಿಕೆ ಶಿವಕುಮಾರ್ ರವರಲ್ಲಿ 90 ಕೋಟಿ ಅನುದಾನದ ಅಂದಾಜು ಪಟ್ಟಿಯನ್ನು ಸಲ್ಲಿಸಲಾಗಿದೆ ಸಾರ್ವಜನಿಕರು ಗುತ್ತಿಗೆದಾರರೊಂದಿಗೆ ಉತ್ತಮ ಗುಣಮಟ್ಟದ ಚರಂಡಿ ರಸ್ತೆ ಮಾಡಲು ಸಹಕರಿಸಬೇಕು ಮತ್ತು ಸಾರ್ವಜನಿಕರು ರಸ್ತೆಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳಬೇಕು ಪಟ್ಟಣದಲ್ಲಿ ಸಿಗ್ನಲ್ ಲೈಟ್ಗಳನ್ನು ಅಳವಡಿಸಲು ಕ್ರಮ ಕೈಗೊಂಡಿದ್ದು ಮೂಲಭೂತ ಸೌಲಭ್ಯ ಕಲ್ಪಿಸಲು ಎಲ್ಲಾ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು

ಈ ಸಂದರ್ಭದಲ್ಲಿ ಮಾಜಿ ಪುರಸಭಾ ಸದಸ್ಯರಾದ ಪಾಪಣ್ಣ. ರೂಪಿಣಿ. ಮಂಜುಳಾ ರಂಗಪ್ಪ. ಸರಸ್ವತಿ. ಜೈಲಕ್ಷ್ಮಿ. ರಂಗಸ್ವಾಮಿ. ಶಂಕರ್. ಮುಖ್ಯ ಅಧಿಕಾರಿ ರವಿಕುಮಾರ್. ಇಂಜಿನಿಯರ್ ಬಿಂದುಸಾರ. ಉಪಸ್ಥಿತರಿದ್ದರು

ಸ್ನೇಹ ಸಂಗಮ ಸೌಹಾರ್ದ ಸಹಕಾರಿಗೆ 8.5 ಕೋಟಿರೂ.ಲಾಭ ಸದಸ್ಯರ ಹಿತರಕ್ಷಣೆ, ಸಮಾಜ ಸೇವೆಗೆ ಆದ್ಯತೆ: ಅಧ್ಯಕ್ಷ ಮಂಜುನಾಥ್

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ವರ್ಷದಿಂದ ವರ್ಷಕ್ಕೆ ಪ್ರಗತಿಯಲ್ಲಿ ಸಾಗುತ್ತಿರುವಸ್ನೇಹ ಸಂಗಮ ಸೌಹಾರ್ದ ಪತ್ತಿನ ಸಹಕಾರಿ ಸಂಘವು 2025-26ನೇ ಸಾಲಿನಲ್ಲಿ 8.5 ಕೋಟಿರೂ. ಲಾಭ ಗಳಿಸಿದೆ. ಸಂಘವು ವ್ಯಾವಾರಿಕ ಅಭಿವೃದ್ಧಿಗೆ ಸೀಮಿತವಾಗದೆ ಸಮಾಜಿಕ ಸೇವಾ ಕಾರ್ಯಕ್ರಮಗಳಲ್ಲೂ ತೊಡಗಿಸಿಕೊಂಡಿದೆ ಎಂದು ಸಂಘದ ಅಧ್ಯಕ್ಷ ಬಿ.ಎಸ್. ಮಂಜುನಾಥ್ ಹೇಳಿದರು.

ಶನಿವಾರ ನಗರದ ಬಾವಿಕಟ್ಟೆ ಕಲ್ಯಾಣ ಮಂಟಪದಲ್ಲಿ ನಡೆದ ಸ್ನೇಹ ಸಂಗಮ ಸೌಹಾರ್ದ ಪತ್ತಿನ ಸಹಕಾರಿ ಸಂಘದ 18ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮುಂದಿನ ದಿನಗಳಲ್ಲಿ ನಗರದ ಎಸ್.ಎಸ್. ಪುರಂ, ಬಿ.ಹೆಚ್. ರಸ್ತೆ ಅಥವಾ ಪ್ರಮುಖ ಬಡಾವಣೆಗಳಲ್ಲಿ ನಿವೇಶನ ಖರೀದಿಸಿ ಸ್ವಂತ ಕಟ್ಟಡ ನಿರ್ಮಿಸಿ ಹೊಸ ಶಾಖೆ ಪ್ರಾರಂಭಿಸುವ ಗುರಿ ಹೊಂದಲಾಗಿದೆ ಎಂದರು.

2009ರಲ್ಲಿ ಪ್ರಾರಂಭಗೊಂಡ ಸಹಕಾರಿಯು ಎಲ್ಲಾ ಸದಸ್ಯರ, ಗ್ರಾಹಕರ ಸಹಕಾರ, ಮಾರ್ಗದರ್ಶನ ಮತ್ತು ಪ್ರೋತ್ಸಾಹದಿಂದ ಪ್ರಗತಿಯನ್ನು ಸಾಧಿಸುತ್ತಾ 17 ವರ್ಷಗಳಲ್ಲಿ ಈ ಘಟ್ಟವನ್ನು ತಲುಪಿರುತ್ತದೆ. ಮುಂದೆ ಇನ್ನಷ್ಟು ಸದೃಢವಾಗಿ ಸಂಘವನ್ನು ಬೆಳೆಸುವ ಹಾದಿಯಲ್ಲಿ ಆಡಳಿತ ಮಂಡಳಿ ಹಲವಾರು ಯೋಜನೆಗಳನ್ನು ರೂಪಿಸಿದೆ ಎಂದು ತಿಳಿಸಿದರು.

ನಮ್ಮ ಸದಸ್ಯರಿಗೆ ಹಾಗೂ ಸಿಬ್ಬಂದಿಗೆ ಸಹಕಾರಿಯಿಂದ ಅಪಘಾತ ವಿಮೆ ಮೊತ್ತವನ್ನು 5 ಲಕ್ಷ ರೂ. ಗಳಿಗೆ ಹೆಚ್ಚಿಸಲಾಗಿದೆ, 2014-15ರಿಂದ ಸದಸ್ಯರಿಗೆ ಹತ್ತು ಸಾವಿರರೂ. ಮರಣೋತ್ತರ ನಿಧಿ ಸ್ಥಾಪಿಸಲಾಗಿದೆ. ಯಶಸ್ವಿನಿ ಸಹಕಾರಿ ಆರೋಗ್ಯ ರಕ್ಷಣಾ ಯೋಜನೆ ಜಾರಿಯಲ್ಲಿದೆ ಎಂದು ಅಧ್ಯಕ್ಷ ಬಿ.ಎಸ್. ಮಂಜುನಾಥ್ ಹೇಳಿದರು.

ನಗರ ವೀರಶೈವ ಸಮಾಜ ಸೇವಾ ಸಮಿತಿ ಅಧ್ಯಕ್ಷ ಕೋರಿ ಮಂಜುನಾಥ್ ಅತಿಥಿಯಾಗಿ ಭಾಗವಹಿಸಿದ್ದರು. ಸಹಕಾರಿಯ ಉಪಾಧ್ಯಕ್ಷ ಟಿ.ಎಸ್. ಲೋಕೇಶ್‌ಕುಮಾರ್, ನಿರ್ದೇಶಕರಾದ ಹೆಚ್.ಆರ್. ನಾಗೇಶ್, ಟಿ.ಎಸ್. ನಳಿನಾ, ಟಿ.ಬಿ. ಮೃತ್ಯುಂಜಯ, ಹೆಚ್.ಎನ್. ಶಿವಕುಮಾರ್, ಪ್ರಭಾಕರ್, ಕೆ.ಎಸ್. ಸುರೇಶ್, ಓ.ಕೆ.ಅರುಣ್‌ಕುಮಾರ್, ಟಿ.ಎಸ್. ಪೃಥ್ವಿಪ್ರಸಾದ್, ಟಿ. ಶಾಂತಕುಮಾರಿ, ಟಿ.ಎಸ್. ಚಿದಾನಂದ್, ಕೃಷ್ಣಪ್ಪ, ಸುಷ್ಮಹೆಚ್.ಎಸ್, ವಿಶೇಷ ಆಹ್ವಾನಿತರಾದ ಡಾ.ಡಿ.ಎಸ್. ಸುರೇಶ್, ಟಿ.ಎಸ್. ಜಗದೀಶ್, ಗಣೇಶ್ ಎಂ ಬಾವಿಕಟ್ಟೆ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಸ್. ಮಂಜುನಾಥ್ ಸೇರಿದಂತೆ ಸದಸ್ಯರು, ಸಿಬ್ಬಂದಿ, ವೀರಶೈವ ಸಮಾಜದ ಹಲವು ಪ್ರಮುಖರು ಭಾಗವಹಿಸಿದ್ದರು.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. CONTACT : 9901010109 GMAIL: suryapragathi2021@gmail.com.